ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿ.,
ಪ್ರಧಾನ ಕಾರ್ಯಾಲಯ, ರಾಜೇಂದ್ರ ಗಂಜ್ ರಸ್ತೆ, ರಾಯಚೂರು-584102. (ಕರ್ನಾಟಕ)
Raichur and Koppal District Central Co-operative Bank Ltd.
HEAD OFFICE : RAJENDRA GUNJ ROAD, RAICHUR-584102. (Karnataka)
www.raichurdcc.bank.in Ph. No. 08532-235147, GSTIN : 29AAGAT5206J1Z8, Email : headoffice@raichurdccb.com

ಸಂಖ್ಯೆ:ಪ್ರ:ಕಾ/ನೇ.ನೇಮಕಾತಿ/01–03/ಹೆಚ್.ಕೆ/2025–26/ ದಿನಾಂಕ: 21.11.2025

# ನೇಮಕಾತಿ ಪ್ರಕಟಣೆ

ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ ನಿಯಮಿತ.,ರಾಯಚೂರು ಇದರಲ್ಲಿ ಖಾಲಿಯಿರುವ **ಅನುಚ್ಛೇದ 371(ಜೆ) ಅಡಿಯಲ್ಲಿ ಕಲ್ಯಾಣ ಕರ್ನಾಟಕ ವೃಂದದಲ್ಲಿನ ಕೆಳಕಂಡ ಗ್ರೂಪ್–"ಎ", ಗ್ರೂಪ್–"ಬಿ" ಮತ್ತು ಗ್ರೂಪ್–"ಸಿ" ಹುದ್ದೆಗಳಿಗೆ** ನೇರ ನೇಮಕಾತಿಗಾಗಿ ಮಾನ್ಯ ಸಹಕಾರ ಸಂಘಗಳ ನಿಬಂಧಕರು ,ಬೆಂಗಳೂರು ಇವರ ಆದೇಶ **ಸಂ:ಆರ್‌ಸಿಎಸ್/ಸಿಆರ್‌ಡಿ/ಸಿಎಬಿ–5/28/2025–26 ದಿನಾಂಕ: 19.07.2025** ರಿತ್ಯ ಅನುಮತಿ ನೀಡಿದ್ದು, ಅರ್ಹ ಅಭ್ಯರ್ಥಿಗಳಿಂದ ಆನ್–ಲೈನ್ ಮೂಲಕ ಅರ್ಜಿಗಳನ್ನು ಅಹ್ವಾನಿಸಲಾಗಿದೆ. ಅರ್ಜಿಗಳನ್ನು ಬ್ಯಾಂಕಿನ ಲಿಂಕ್ https://tascguru.com/raichur-dcc-bank/ ಇದರ ಮುಖಾಂತರ ಸಲ್ಲಿಸತಕ್ಕದ್ದು.

**ಅನುಚ್ಛೇದ 371(ಜೆ) ಅಡಿಯಲ್ಲಿ ಕಲ್ಯಾಣ ಕರ್ನಾಟಕ ವೃಂದದ ಹುದ್ದೆಗಳು(HK)**

| ಕ್ರ.ಸಂ | ಹುದ್ದೆಯ ಪದನಾಮ | ಹುದ್ದೆಗಳ ಸಂಖ್ಯೆ | ವೇತನ ಶ್ರೇಣಿ |
|---|---|---|---|
| 1 | ಶಾಖಾ ವ್ಯವಸ್ಥಾಪಕರು ಗ್ರೇಡ–1 | 11 | 61300–1500–64300–1650–74200–1900–85600–2300–99400–2700–112900 |
| 2 | ಸಹಾಯಕರ ಗ್ರೇಡ–1 | 34 | 44425–1125–47800–1250–52800–1375–58300–1500–64300–1650–74200–1900–83700 |
| 3 | ಅಟೆಂಡರ್ | 8 | 37500–900–39300–1000–43300–1125–47800–1250–52800–1375–58300–1500–64300–1650–74200–1900–76100 |

1) **ಆಯ್ಕೆ ಪ್ರಕ್ರಿಯೆಗೆ ನಿಗಧಿಪಡಿಸಿರುವ ದಿನಾಂಕಗಳು:**

| | |
|---|---|
| ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಪ್ರಾರಂಭಿಕ ದಿನಾಂಕ | **21–11–2025** |
| ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **22–12–2025 ಸಂಜೆ 5.30 ಗಂಟೆಯವರೆಗೆ** |
| ಸ್ಪರ್ಧಾತ್ಮಕ ಪರೀಕ್ಷಾ ದಿನಾಂಕ(ತಾತ್ಕಾಲಿಕ ) | **15–01–2026** |

2) ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ತೊಂದರೆಗಳು ಎದುರಾದಲ್ಲಿ ಅಭ್ಯರ್ಥಿಗಳು ಈ ಕೆಳಕಂಡ ಹೆಲ್ಪಲೈನ್ ನಂಬರ್‌ಗೆ ಸಂಪರ್ಕಿಸುವುದು
ಹೆಲ್ಪಲೈನ್ ನಂಬರ್ : 8310460727

3) ಹುದ್ದೆಗಳ ವರ್ಗೀಕರಣ:

ಗ್ರೂಪ್–"ಎ" ಹುದ್ದೆಗಳು

| ಶಾಖಾ ವ್ಯವಸ್ಥಾಪಕರು ಗ್ರೇಡ್–1 | | | | | |
|---|---|---|---|---|---|
| ಕಲ್ಯಾಣ ಕರ್ನಾಟಕ (HK) ವೃಂದದ –11 ಹುದ್ದೆಗಳು | | | | | |
| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಅಂ.ವಿ. | ಒಟ್ಟು |
| ಸಾಮಾನ್ಯ | 1 | 2 | 1 | 1* | 5 |
| ಪ.ಜಾ(ಪ್ರವರ್ಗ–ಎ) | 1 | 0 | 0 | 0 | 1 |
| ಪ.ಜಾ(ಪ್ರವರ್ಗ–ಬಿ) | 1 | 0 | 0 | 0 | 1 |
| ಪ.ಪಂ | 1 | 0 | 0 | 0 | 1 |
| ಪ್ರವರ್ಗ–1 | 1 | 0 | 0 | 0 | 1 |
| ಪ್ರವರ್ಗ–2ಎ | 1 | 0 | 0 | 0 | 1 |
| ಪ್ರವರ್ಗ–2ಬಿ | 1 | 0 | 0 | 0 | 1 |
| **ಒಟ್ಟು** | **7** | **2** | **1** | **1** | **11** |
| *ಅಂಗವಿಕಲ: ದೃಷ್ಟಿಮಾಂದ್ಯ (Blindness or low vision) –––ಸಾಮಾನ್ಯ–1 | | | | | |

ಗ್ರೂಪ್–"ಬಿ" ಹುದ್ದೆಗಳು

| ಸಹಾಯಕರ ಗ್ರೇಡ್–1 | | | | | | | |
|---|---|---|---|---|---|---|---|
| ಕಲ್ಯಾಣ ಕರ್ನಾಟಕ (HK)ವೃಂದದ—34 ಹುದ್ದಗಳು | | | | | | | |
| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಮಾ.ಸೈ | ಕ.ಮಾ.ಅ | ಅಂ ವಿ | ಒಟ್ಟು |
| ಸಾಮಾನ್ಯ | 2 | 6 | 4 | 1 | 1 | 1* | 15 |
| ಪ.ಜಾ(ಪ್ರವರ್ಗ–ಎ) | 1 | 1 | 0 | 0 | 0 | 0 | 2 |
| ಪ.ಜಾ(ಪ್ರವರ್ಗ–ಬಿ) | 1 | 1 | 0 | 0 | 0 | 0 | 2 |
| ಪ.ಜಾ(ಪ್ರವರ್ಗ–ಸಿ) | 1 | 1 | 0 | 0 | 0 | 0 | 2 |
| ಪ.ಪಂ | 1 | 1 | 1 | 0 | 0 | 0 | 3 |
| ಪ್ರವರ್ಗ–1 | 1 | 1 | 0 | 0 | 0 | 0 | 2 |
| ಪ್ರವರ್ಗ2ಎ | 1 | 2 | 1 | 0 | 0 | 1* | 5 |
| ಪ್ರವರ್ಗ2ಬಿ | 1 | 0 | 0 | 0 | 0 | 0 | 1 |
| ಪ್ರವರ್ಗ–3ಎ | 1 | 0 | 0 | 0 | 0 | 0 | 1 |
| ಪ್ರವರ್ಗ–3ಬಿ | 1 | 0 | 0 | 0 | 0 | 0 | 1 |
| ಒಟ್ಟು | 11 | 13 | 6 | 1 | 1 | 2 | 34 |
| *ಅಂಗವಿಕಲ: ದೃಷ್ಟಿಮಾಂದ್ಯ (Blindness or low vision) ––– ಸಾಮಾನ್ಯ–1, ಪ್ರವರ್ಗ2ಎ––1, | | | | | | | |

ಗ್ರೂಪ್–"ಸಿ" ಹುದ್ದೆಗಳು

| ಅಟೆಂಡರ | | | | | |
|---|---|---|---|---|---|
| ಕಲ್ಯಾಣ ಕರ್ನಾಟಕ (HK)ವೃಂದದ–8 ಹುದ್ದೆಗಳು | | | | | |
| ಮೀಸಲಾತಿ | ಇತರೆ | ಮಹಿಳೆ | ಗ್ರಾಮೀಣ | ಅಂ ವಿ | ಒಟ್ಟು |
| ಸಾಮಾನ್ಯ | 1 | 1 | 1 | 1* | 4 |
| ಪ.ಜಾ(ಪ್ರವರ್ಗ–ಎ) | 1 | 0 | 0 | 0 | 1 |
| ಪ.ಪಂ | 1 | 0 | 0 | 0 | 1 |
| ಪ್ರವರ್ಗ–1 | 1 | 0 | 0 | 0 | 1 |
| ಪ್ರವರ್ಗ2ಎ | 1 | 0 | 0 | 0 | 1 |
| **ಒಟ್ಟು** | **5** | **1** | **1** | **1** | **8** |
| *ಅಂಗವಿಕಲ: ದೃಷ್ಟಿಮಾಂದ್ಯ (Blindness or low vision) –––ಸಾಮಾನ್ಯ–1 | | | | | |

4) ಆಯ್ಕೆ ವಿಧಾನ:

**ಶಾಖಾ ವ್ಯವಸ್ಥಾಪಕರು ಗ್ರೇಡ–1 ಮತ್ತು ಸಹಾಯಕರು ಗ್ರೇಡ–1 ಹುದ್ದೆಗಳನ್ನು 2 ಗಂಟೆಗಳ ಅವಧಿಯ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.**

| ಶಾಖಾ ವ್ಯವಸ್ಥಾಪಕರು ಗ್ರೇಡ–1 ಮತ್ತು ಸಹಾಯಕರು ಗ್ರೇಡ–1 ಹುದ್ದೆಗಳಿಗೆ : 200 ಅಂಕಗಳ ಲಿಖಿತ ಪರೀಕ್ಷೆಯು ಈ ಕೆಳಕಂಡ ವಿಷಯಗಳು ಒಳಗೊಂಡಿರುತ್ತವೆ. | | | |
|---|---|---|---|
| ಕ್ರ.ಸಂ | ವಿಷಯ | | ಅಂಕಗಳು |
| 1 | ಕನ್ನಡ ಬಾಷೆ | | 50 |
| 2 | ಸಾಮಾನ್ಯ ಇಂಗ್ಲೀಷ್ | | 25 |
| 3 | ಸಾಮಾನ್ಯ ಜ್ಞಾನ | | 25 |
| 4 | ಸಹಕಾರಿ ವಿಷಯಗಳು | | 50 |
| 5 | ಭಾರತ ಸಂವಿದಾನ | | 25 |
| 6 | ಬ್ಯಾಂಕು/ಸಂಸ್ಥೆಯ ಯುಕ್ತವಾದ ಚಟುವಟಿಕೆಗಳು ಮತ್ತು ವಸ್ತುನಿಷ್ಠ ವಿಷಯ ವಸ್ತುಗಳಿಗೆ ಸಂಬಂಧಿಸಿದಂತೆ | | 25 |
| ಒಟ್ಟು | | | 200 |

ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ರಚಿಸಲಾದ ಅರ್ಹತಾ (MERIT LIST)ಪಟ್ಟಿಯ ಪ್ರಕಾರ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸಿ ಉಳಿದ 15 ಪ್ರತಿಶತ ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು. ಈ ರೀತಿ ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಒಟ್ಟುಗೂಡಿಸಿ ಆಯಾ ವರ್ಗಗಳ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು(Final Selection list) ರಚಿಸಲಾಗುವುದು.

**ಅಟೆಂಡರ ಹುದ್ದೆಗಳನ್ನು 1 ಗಂಟೆಯ ಅವಧಿಯ ಲಿಖಿತ ಪರೀಕ್ಷೆ ಹಾಗೂ ಸಂದರ್ಶನದ ಮೂಲಕ ಆಯ್ಕೆ ಮಾಡಲಾಗುವುದು.**

| ಅಟೆಂಡರ್ ಹುದ್ದೆಗೆ: 100 ಅಂಕಗಳ ಲಿಖಿತ ಪರೀಕ್ಷೆಯಲ್ಲಿ ಈ ಕೆಳಕಂಡ ವಿಷಯಗಳು ಒಳಗೊಂಡಿರುತ್ತವೆ. | | |
|---|---|---|
| ಕ್ರ.ಸಂ | ವಿಷಯ | ಅಂಕಗಳು |
| 1 | ಕನ್ನಡ ಭಾಷೆ | 50 |
| 2 | ಸಾಮಾನ್ಯ ಜ್ಞಾನ | 50 |
| ಒಟ್ಟು | | 100 |

ಅಟೆಂಡರ್ ಹುದ್ದೆಗೆ ಲಿಖಿತ ಪರೀಕ್ಷೆಯಲ್ಲಿ ಪಡೆದ ಅಂಕಗಳ ಆಧಾರದ ಮೇಲೆ ರಚಿಸಲಾದ ಅರ್ಹತಾ (MERIT LIST)ಪಟ್ಟಿಯ ಪ್ರಕಾರ 1:5 ಅನುಪಾತದಲ್ಲಿ ಸಂದರ್ಶನಕ್ಕೆ ಕರೆಯಲಾಗುವುದು. ಲಿಖಿತ ಪರೀಕ್ಷೆಯಲ್ಲಿ ಪಡೆಯಲಾದ ಅಂಕಗಳನ್ನು ಶೇಕಡಾ 85ಕ್ಕೆ ಇಳಿಸಿ ಉಳಿದ 15 ಪ್ರತಿಶತ ಅಂಕಗಳನ್ನು ಸಂದರ್ಶನಕ್ಕೆ ನೀಡಲಾಗುವುದು.ಈ ರೀತಿ ಲಿಖಿತ ಪರೀಕ್ಷೆ ಮತ್ತು ಸಂದರ್ಶನದಲ್ಲಿ ಪಡೆದ ಅಂಕಗಳನ್ನು ಒಟ್ಟುಗೂಡಿಸಿ ಆಯಾ ವರ್ಗಗಳ ಅಭ್ಯರ್ಥಿಗಳ ಅಂತಿಮ ಆಯ್ಕೆ ಪಟ್ಟಿಯನ್ನು (Final Selection list)ರಚಿಸಲಾಗುವುದು.

5) **.ಅರ್ಜಿ ಶುಲ್ಕ ಮತ್ತು ಪಾವತಿಸುವ ವಿಧಾನ : (Non-Refundable)**

Payment using Net Banking, Credit Card, Debit Card ಮತ್ತು UPI ಮುಖಾಂತರ ಅರ್ಜಿ ಶುಲ್ಕ ಅನ್ವಯಿಸುವ ಜಿ.ಎಸ್.ಟಿ ಹಾಗೂ ಇತರೇ ಶುಲ್ಕವನ್ನು ಪಾವತಿಸತಕ್ಕದ್ದು. ಶುಲ್ಕವನ್ನು ಪಾವತಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದ ರಾತ್ರಿ 11.59 ಒಳಗಾಗಿ ಪಾವತಿಸತಕ್ಕದ್ದು,ಇದನ್ನು ಹೊರತುಪಡಿಸಿ ಚೆಕ್/ಡಿ.ಡಿ/ಮನಿ–ಆರ್ಡರ್/ಪೋಸ್ಟಲ್ ಆರ್ಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ ಹಾಗೂ ಅಭ್ಯರ್ಥಿಗಳು ಅರ್ಜಿ ಶುಲ್ಕವನ್ನು ಅನ್ವಯಿಸುವ ಜಿ.ಎಸ್.ಟಿ ಮತ್ತು ಇತರೆ ವೆಚ್ಚಗಳನ್ನು ನಿಗಧಿಪಡಿಸಿದ ದಿನಾಂಕ, ಸಮಯದೊಳಗಾಗಿ ಸಲ್ಲಿಸತಕ್ಕದ್ದು. **ಸೂಚನೆ: ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವವರು ಪ್ರತಿ ಹುದ್ದೆಗೆ ಪ್ರತ್ಯೇಕ ಅರ್ಜಿಯ ಜೊತೆಗೆ ಪ್ರತ್ಯೇಕ ಅರ್ಜಿ ಶುಲ್ಕ** ಅನ್ವಯಿಸುವ ಜಿ.ಎಸ್.ಟಿ ಮತ್ತು ಇತರೆ ವೆಚ್ಚಗಳೊಂದಿಗೆ **ಸಲ್ಲಿಸುವುದು.**

| | **ಶಾಖಾ ವ್ಯವಸ್ಥಾಪಕರು ಗ್ರೇಡ–1** | **ಸಹಾಯಕರು ಗ್ರೇಡ–1** | **ಅಟೆಂಡರ್** |
|---|---|---|---|
| ಪ.ಜಾತಿ, ಪ.ಪಂಗಡ ,ಪ್ರವರ್ಗ–1, ಮಾಜಿ ಸೈನಿಕರಿಗೆ, ಹಾಗೂ ಅಂಗವಿಕಲ ಅಭ್ಯರ್ಥಿಗಳಿಗೆ | 800.00 | 800.00 | 500.00 |
| ಇತರರು | 1600.00 | 1600.00 | 1000.00 |

6) **ವಯೋಮಿತಿ: ನೇಮಕಾತಿ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಕ್ಕೆ ಅಭ್ಯರ್ಥಿಗಳ ಕನಿಷ್ಟ/ಗರಿಷ್ಟ ವಯೋಮಿತಿ ಈ ಕೆಳಕಂಡಂತೆ ಇರತಕ್ಕದ್ದು.**

| **ಕ್ರ.ಸಂ.** | **ಮೀಸಲಾತಿ ವರ್ಗೀಕರಣ** | **ಕನಿಷ್ಟ ವಯೋಮಿತಿ** | **ಗರಿಷ್ಟ ವಯೋಮಿತಿ** | ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ262ಸೇನೆನಿ2025 ಬೆಂಗಳೂರು, ದಿನಾಂಕ 29–09–2025ರನ್ವಯ | |
|---|---|---|---|---|---|
| | | | | **ಸಡಲಿಕೆ** | **ಗರಿಷ್ಟ ವಯೋಮಿತಿ** |
| 1 | ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡ/ ಪ್ರವರ್ಗ–1 | 18 | 40 | 03 | 43 |
| 2 | ಪ್ರವರ್ಗ 2ಎ, 2ಬಿ, 3ಎ, 3ಬಿ | 18 | 38 | 03 | 41 |
| 3 | ಸಾಮಾನ್ಯ ವರ್ಗ | 18 | 35 | 03 | 38 |

ಅಲ್ಲದೆ ಈ ಕೆಳಕಂಡ ಅಭ್ಯರ್ಥಿಗಳಿಗೆ ಹೆಚ್ಚುವರಿಯಾಗಿ ಈ ಕೆಳಗಿನಂತೆ ವಯೋಮಿತಿ ಸಡಿಲಿಕೆ ಅಲ್ಲದೇ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ262ಸೇನೆನಿ2025 ಬೆಂಗಳೂರು, ದಿನಾಂಕ 29–09–2025ರನ್ವಯ ಹೆಚ್ಚುವರಿ ಸಡಿಲಿಕೆ ಇರುತ್ತದೆ.

| ಕ್ರ.ಸಂ. | ವಿವರ | ಸಡಿಲಿಕೆ ಅವಧಿ |
|---|---|---|
| 1 | ಮಾಜಿ ಸೈನಿಕರಿಗೆ | ಮಿಲಿಟರಿ ಸೇವೆಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ |
| 2 | ಎನ್‌ಸಿಸಿ ಕೆಡೆಟ್ ಇನ್ಸ್ಪೆಕ್ಟರ್‌ಗಳಿಗೆ | ಕೆಡೆಟ್ ಇನ್ಸ್ಪೆಕ್ಟರ್‌ಆಗಿ ಎನ್‌ಸಿಸಿಯಲ್ಲಿ ಸೇವೆ ಸಲ್ಲಿಸಿದ ಅವಧಿಗೆ |
| 3 | ವಿಧವೆಯರಿಗೆ(ಅಭ್ಯರ್ಥಿಯು ಸಕ್ಷಮ ಪ್ರಾಧಿಕಾರದಿಂದ ತಾನು ವಿಧವೆಯೆಂದು ಹಾಗೂ ಮರು ಮಧುವೆಯಾಗಿರುವುದಿಲ್ಲ ವೆಂಬ ಪ್ರಮಾಣ ಪತ್ರ) | 10 ವರ್ಷಗಳ ಅವಧಿಗೆ |
| 4 | ಅಂಗವಿಕಲರಿಗೆ | 10 ವರ್ಷಗಳ ಅವಧಿಗೆ |

7) ವಿಧ್ಯಾರ್ಹತೆ : ಶಾಖಾ ವ್ಯವಸ್ಥಾಪಕರು ಗ್ರೇಡ–1 ,ಬ್ಯಾಂಕ ಸಹಾಯಕರು ಗ್ರೇಡ–1 ಮತ್ತು ಅಟೆಂಡರ್ ಹುದ್ದೆಗಳಿಗೆ ನಿಗಧಿಪಡಿಸಲಾದ ವಿದ್ಯಾರ್ಹತೆ

| ಹುದ್ದೆಯ ಹೆಸರು | ನಿಗಧಿಪಡಿಸಿದ ವಿದ್ಯಾರ್ಹತೆ |
|---|---|
| ಶಾಖಾ ವ್ಯವಸ್ಥಾಪಕರು ಗ್ರೇಡ–1 | 1)ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾನಿಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು.<br>2)ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಮತ್ತು<br>3)ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ ,ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |
| ಸಹಾಯಕರು ಗ್ರೇಡ–1 | 1)ಭಾರತದ ಕಾನೂನಿನ ಅಡಿಯಲ್ಲಿ ಸ್ಥಾಪನೆಯಾದ ವಿಶ್ವವಿದ್ಯಾನಿಲಯದ ಯಾವುದೇ ಪದವಿಯಲ್ಲಿ ತೇರ್ಗಡೆಯಾಗಿರಬೇಕು.<br>2)ಕಂಪ್ಯೂಟರ್ ಜ್ಞಾನ ಹೊಂದಿರಬೇಕು ಮತ್ತು<br>3)ಕನ್ನಡವನ್ನು ಓದುವ ಸಾಮರ್ಥ್ಯದ ಜೊತೆ ಕನ್ನಡದ ಜ್ಞಾನ ,ಬರೆಯುವಿಕೆ, ಕನ್ನಡವನ್ನು ಸ್ವಚ್ಛವಾಗಿ ಮಾತನಾಡಬೇಕು ಮತ್ತು ಅರ್ಥಮಾಡಿಕೊಳ್ಳಬೇಕು. |
| ಅಟೆಂಡರ್ | ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿದ್ದು ಕನ್ನಡವನ್ನು ಒಂದು ಭಾಷೆಯಾಗಿ ಓದಿರಬೇಕು. |

8) ನೇಮಕಾತಿ ಪ್ರಧಿಕಾರವು ಅಧಿಸೂಚನೆಯಲ್ಲಿ ಹುದ್ದೆಗಳ ಮಿಸಲಾತಿಗೆ ಸಂಬಂಧಿಸಿದಂತೆ ಮತ್ತು ಅರ್ಜಿ ಸಲ್ಲಿಸುವು ಸಂದರ್ಭದಲ್ಲಿ ಉಪಯೋಗಿಸಿದ ಪದಗಳ ಅರ್ಥವನ್ನು ಈ ಕೆಳಕಂಡಂತೆ ಅರ್ಥೈಸಿಕೊಳ್ಳಬೇಕು.

| | | | |
|---|---|---|---|
| ಸಾಮಾನ್ಯ | ಸಾಮಾನ್ಯ ಅರ್ಹತೆ | GM | General Merit |
| ಪ.ಜಾ (ಪ್ರವರ್ಗ–ಎ) | ಪರಿಶಿಷ್ಠ ಜಾತಿ (ಪ್ರವರ್ಗ–ಎ) | SC (Cat-A) | Scheduled Caste(Category-A) |
| ಪ.ಜಾ (ಪ್ರವರ್ಗ–ಬಿ) | ಪರಿಶಿಷ್ಠ ಜಾತಿ (ಪ್ರವರ್ಗ–ಬಿ) | SC (Cat-B) | Scheduled Caste(Category-B) |
| ಪ.ಜಾ (ಪ್ರವರ್ಗ–ಸಿ) | ಪರಿಶಿಷ್ಠ ಜಾತಿ (ಪ್ರವರ್ಗ–ಸಿ) | SC (Cat-C) | Scheduled Caste(Category-C) |
| ಪ.ಪಂ | ಪರಿಶಿಷ್ಠ ಪಂಗಡ | ST | Scheduled Tribe |
| ಮಾಜಿ ಸೈನಿಕ | ಮಾಜಿ ಸೈನಿಕ ಅಭ್ಯರ್ಥಿ | Cat-1 | Category-1 |
| ಗ್ರಾಮೀಣ | ಗ್ರಾಮೀಣ ಅಭ್ಯರ್ಥಿ | 2A | Category-2A |
| ಕನ್ನಡ ಮಾಧ್ಯಮ | ಕನ್ನಡ ಮಾಧ್ಯಮ ಅಭ್ಯರ್ಥಿ | 2B | Category-2B |
| ಅಂಗವಿಕಲ | ಅಂಗವೀಕಲ ಅಭ್ಯರ್ಥಿ | 3A | Category-3A |
| | | 3B | Category-3B |
| | | Ex-Mp | Ex-Military Person |
| | | Rural | Rural Candidate |
| | | KMS | Kannada Medium Student |
| | | PH | Physically Handicapped |

## 9) ಸಾಮಾನ್ಯ ಸೂಚನೆಗಳು:

1. ಅಭ್ಯರ್ಥಿಗಳು ಅರ್ಜಿ ಹಾಕಲು ಆನ್‌ಲೈನ್ ನಲ್ಲಿ ಅಪಲೋಡ ಮಾಡಿರುವ ಅಧಿಸೂಚನೆಯಲ್ಲಿ ನೀಡಿರುವ ಸೂಚನೆಗಳನ್ನು ತಪ್ಪದೇ ಪಾಲಿಸುವುದು.
2. ಅರ್ಜಿಗಳನ್ನು ಭರ್ತಿಮಾಡಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ನೇರ ಪ್ರಕಟಣೆಯಲ್ಲಿ ಆಯಾ ಹುದ್ದೆಗಳ ಮುಂದೆ ಸೂಚಿಸಿರುವ ವಿಧ್ಯಾರ್ಹತೆಯನ್ನು ಅಭ್ಯರ್ಥಿಗಳು ಕಡ್ಡಾಯವಾಗಿ ಹೊಂದಿರಬೇಕು.
3. ಕನ್ನಡ ಭಾಷಾ ಜ್ಞಾನ ( ಓದುವುದು, ಬರೆಯುವುದು, ಮಾತನಾಡುವುದು) ಕಡ್ಡಾಯವಾಗಿರುತ್ತದೆ.
4. ಅರ್ಜಿಗಳನ್ನು ಆನ್‌ಲೈನ್ ಮೂಲಕವೇ ಭರ್ತಿ ಮಾಡಿ ಭಾವಚಿತ್ರ/ಸಹಿ/ವಯೋಮಿತಿ/ವಿದ್ಯಾರ್ಹತೆ ಹಾಗೂ ಕೋರಿದ ಮೀಸಲಾತಿಗೆ/ಇತರೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ನಂತರ ಶುಲ್ಕವನ್ನು ಸಂದಾಯ ಮಾಡಬಹುದಾಗಿರುತ್ತದೆ.
5. ಶುಲ್ಕವನ್ನು ಪಾವತಿಸದ ಹಾಗೂ ದಾಖಲೆಗಳನ್ನು ಭಾವಚಿತ್ರ/ಸಹಿಯನ್ನು ಅಪ್‌ಲೋಡ್ ಮಾಡದೇ ಇರುವ / ಅಸ್ಪಷ್ಟ ದಾಖಲೆಗಳನ್ನು ಅಪ್ ಲೋಡ್ ಮಾಡಿರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
6. ಅರ್ಜಿಯಲ್ಲಿ ನಮೂದಿಸಿದ ಅಂಕಪಟ್ಟಿ / ಇತರೆ ದಾಖಲಾತಿಗಳಲ್ಲಿ ಯಾವುದೇ ವ್ಯತ್ಯಾಸ ಕಂಡುಬಂದಲ್ಲಿ ಮತ್ತು ಅರ್ಜಿಗಳು ನೇಮಕಾತಿ ಅಧಿಸೂಚನೆ ವ್ಯತಿರಿಕ್ತವಾಗಿ ಕಂಡುಬಂದಲ್ಲಿ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
7. ಈ ನೇಮಕಾತಿ ಪ್ರಕಟಣೆಯನ್ನು ಯಾವುದೇ ಕಾರಣ ನೀಡದೇ ಯಾವುದೇ ಹಂತದಲ್ಲಿ ಹಿಂದಕ್ಕೆ ಪಡೆಯುವ / ರದ್ದು ಪಡಿಸುವ /ದಿನಾಂಕವನ್ನು ಮುಂದೂಡುವ ಅಧಿಕಾರವನ್ನು ಬ್ಯಾಂಕು ಹೊಂದಿರುತ್ತದೆ. ಅಭ್ಯರ್ಥಿಗಳು ಆಯ್ಕೆಯಾದ ನಂತರ ಸಲ್ಲಿಸಿರುವ ದಾಖಲಾತಿಗಳ ನೈಜತೆಯನ್ನು ಸಂಬಂಧಪಟ್ಟ ಸಂಸ್ಥೆ /ಪ್ರಾಧಿಕಾರ/ ವಿಶ್ವ ವಿಧ್ಯಾಲಯಗಳಿಂದ ದೃಡೀಕರಿಸಿಕೊಳ್ಳುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿದೆ.
8. ತಪ್ಪು ಮಾಹಿತಿಗಳನ್ನು, ಅಸ್ಪಷ್ಟ ಮಾಹಿತಿ, ಸಹಿ ಇಲ್ಲದೇ ಇರುವ, ದಾಖಲಾತಿಗಳನ್ನು ಸರಿಯಾಗಿ ಸ್ಕ್ಯಾನ ಮಾಡದೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹವರ ಅರ್ಜಿಯನ್ನು ಯಾವುದೇ ನೋಟೀಸ್ ನೀಡದೇ ತಿರಸ್ಕರಿಸಲಾಗುವುದು.
9. ಅರ್ಜಿ ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕದೊಳಗೆ ಅಭ್ಯರ್ಥಿಗಳು ಆಯಾ ಹುದ್ದೆಗೆ ಮತ್ತು ವರ್ಗಕ್ಕೆ ನಿಗಧಿಪಡಿಸಿದ ಸಂಪೂರ್ಣ ಶುಲ್ಕವನ್ನು ಸಂದಾಯ ಮಾಡದಿದ್ದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
10. ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಚಿಸಿದಲ್ಲಿ ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸಿ, ಪ್ರತ್ಯೇಕವಾಗಿ ಅರ್ಜಿ ಶುಲ್ಕವನ್ನು ಪಾವತಿಸತಕ್ಕದ್ದು.
11. ಅರ್ಜಿ ಶುಲ್ಕವನ್ನು ಪಾವತಿಸುವುದಕ್ಕೆ ಡೆಬಿಟ್ ಕಾರ್ಡ್/ ಕ್ರೆಡಿಟ್ ಕಾರ್ಡ್/ ಆನ್‌ಲೈನ್ ಮೂಲಕ ನಿಗದಿತ ಶುಲ್ಕ + ಅನ್ವಯಿಸುವ ಜಿ.ಎಸ್.ಟಿ ಮತ್ತು ಇತರೆ ವೆಚ್ಚಗಳನ್ನು ಪ್ರತ್ಯೇಕವಾಗಿ ಪಾವತಿ ಮಾಡತಕ್ಕದ್ದು
12. ಶುಲ್ಕವನ್ನು ಪಾವತಿಸಲು ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಶುಲ್ಕವನ್ನು ಸಂದಾಯ ಮಾಡಿದ್ದಲ್ಲಿ ಅಂತಹವರ ಅರ್ಜಿಯನ್ನು ತಿರಸ್ಕರಿಸಲಾಗುವುದು. ಡಿಡಿ/ಚೆಕ್/ ಪೋಸ್ಟಲ್ ಆರ್ಡರ್/ಮನಿ ಆರ್ಡರ್ ಇವುಗಳನ್ನು ಸ್ವೀಕರಿಸಲಾಗುವುದಿಲ್ಲ.
13. ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೂ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸುವುದು.
14. ತಪ್ಪು ಮಾಹಿತಿಗಳನ್ನು ನೀಡಿ ಅರ್ಜಿ ಸಲ್ಲಿಸಿದಲ್ಲಿ ಅಂತಹವರ ವಿರುದ್ಧ ಕಾನೂನಿನ ಪ್ರಕಾರ ಸೂಕ್ತ ಕ್ರಮ ಕೈಗೊಳ್ಳುವ ಹಕ್ಕನ್ನು ಬ್ಯಾಂಕು ಕಾಯ್ದಿರಿಸಿಕೊಂಡಿರುತ್ತದೆ.

15. ಒಮ್ಮೆ ಶುಲ್ಕವನ್ನು ಪಾವತಿಸಿದ ನಂತರ ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಇತರ ಯಾವುದೇ ನೇಮಕಾತಿಗಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗುವುದಿಲ್ಲ.

16. ಅಭ್ಯರ್ಥಿಗಳು ಅರ್ಜಿ ಶುಲ್ಕ ಪಾವತಿಸುವ ಸಂದರ್ಭದಲ್ಲಿ ಯಾವುದೇ ತಾಂತ್ರಿಕ ತೊಂದರೆ ಎದುರಿಸಿದಲ್ಲಿ, ಅಂತಹ ಅಭ್ಯರ್ಥಿಗಳು ತಾಂತ್ರಿಕ ತೊಂದರೆ ಕುರಿತು ಅಗತ್ಯ ಪೂರಕ ದಾಖಲೆಗಳೊಂದಿಗೆ ಕೋರಿಕೆ ಬಂದಲ್ಲಿ ಅಂತಹ ಕೋರಿಕೆಗಳ ನೈಜತೆ ಕುರಿತು ಪರಿಶೀಲಿಸಲಾಗುವುದು

17. ಅರ್ಜಿ ಶುಲ್ಕ ಇಲ್ಲದೇ ಸಲ್ಲಿಸಲಾದ ಟ್ರೈಯಲ್ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

18. ಸದರಿ ಹುದ್ದೆಗಳಿಗೆ ಆನ್‌ಲೈನ್ ಅರ್ಜಿಯೊಂದಿಗೆ ಸಲ್ಲಿಸುವ ಲಗತ್ತುಗಳನ್ನು ಅವಶ್ಯಕ ಸಂದರ್ಭಗಳಲ್ಲಿ ಬ್ಯಾಂಕ್ ಪರಿಶೀಲನೆಗೆ ಒಳಪಡಿಸಬಹುದಾಗಿರುತ್ತದೆ. ಆದ್ದರಿಂದ ಅಭ್ಯರ್ಥಿಗಳು ಜಾಗುರುಕತೆಯಿಂದ ತಮಗೆ ಅನ್ವಯಿಸುವ ಎಲ್ಲಾ ದಾಖಲೆಗಳನ್ನು ಸ್ಪಷ್ಟವಾಗಿ ಗೋಚರಿಸುವ ರೀತಿಯಲ್ಲಿ ಅಪ್‌ಲೋಡ್ ಮಾಡತಕ್ಕದ್ದು. ಮೂಲ ದಾಖಲಾತಿಗಳನ್ನು ಪರಿಶೀಲಿಸುವ ಸಂದರ್ಭದಲ್ಲಿ ಈಗಾಗಲೇ ಆನ್‌ಲೈನ್ ಅರ್ಜಿಯೊಂದಿಗೆ ಅಪ್‌ಲೋಡ್ ಮಾಡಿರುವ ಪ್ರಮಾಣ ಪತ್ರಗಳ ಪ್ರತಿಗಳನ್ನು ತಪ್ಪದೇ ಹಾಜರಪಡಿಸತಕ್ಕದ್ದು.

19. ಅಭ್ಯರ್ಥಿಗಳು ಅರ್ಜಿಗಳನ್ನು (Submit) ಮಾಡುವ ಮೊದಲು ಎಲ್ಲಾ ವಿವಿರಗಳು ಸರಿಯಾಗಿದೇಯೇ ಎಂದು ಪರಿಶೀಲಿಸಿಕೊಂಡು ಸಲ್ಲಿಸಲು ಸೂಚಿಸಿದೆ. ಸಲ್ಲಿಸಿದ ನಂತರ, ವಿವಿರಗಳನ್ನು ತಪ್ಪಾಗಿ ಸಲ್ಲಿಸಿದ್ದು, ಸರಿಪಡಿಸಿಕೊಡುವಂತೆ ಬ್ಯಾಂಕಿಗೆ ಪತ್ರವ್ಯವಹಾರ ಅಥವಾ ಇ-ಮೇಲ್ ಮೂಲಕ ಕಳುಹಿಸುವ ಕೋರಿಕೆಯನ್ನು ಪರಿಶೀಲಿಸಲಾಗುವುದಿಲ್ಲ.

20. ತಪ್ಪು ಮಾಹಿತಿಗಳನ್ನು, ಅಸ್ಪಷ್ಟ ಮಾಹಿತಿ, ಸಹಿ ಇಲ್ಲದೇ ಇರುವ, ದಾಖಲಾತಿಗಳನ್ನು ಸರಿಯಾಗಿ ಸ್ಕ್ಯಾನ ಮಾಡದೆ ಅರ್ಜಿ ಸಲ್ಲಿಸಿದ್ದಲ್ಲಿ ಅಂತಹವರ ಅರ್ಜಿಯನ್ನು ಯಾವುದೇ ನೋಟೀಸ್ ನೀಡದೇ ತಿರಸ್ಕರಿಸಲಾಗುವುದು.

21. ಆಯ್ಕೆಗೊಂಡ ಅಭ್ಯರ್ಥಿಗಳಿಗೆ ಪರೀಕ್ಷಾವಧಿ ಬ್ಯಾಂಕು ನಿಗದಿಪಡಿಸಿದಂತೆ ಇರುತ್ತದೆ. ಅವಶ್ಯವಿದ್ದಲ್ಲಿ ಪರೀಕ್ಷಾವಧಿಯನ್ನು ವಿಸ್ತರಿಸಲಾಗುವುದು. ಪರೀಕ್ಷಾವಧಿಯಲ್ಲಿ ಅಭ್ಯರ್ಥಿಗಳ ಸೇವೆ ತೃಪ್ತಿಕರವಾಗಿದ್ದಲ್ಲಿ ಮಾತ್ರ ಅಂತಹವರ ಸೇವೆಯನ್ನು ಖಾಯಂಗೊಳಿಸಲಾಗುವುದು.

**10) ಪತ್ರ ವ್ಯವಹಾರ:**

ನೇಮಕಾತಿ ಪ್ರಕ್ರಿಯೆ ಕುರಿತಂತೆ ಅಭ್ಯರ್ಥಿಗಳೊಂದಿಗೆ ಯಾವುದೇ ಪತ್ರ ವ್ಯವಹಾರವನ್ನು ನಡೆಸಲಾಗುವುದಿಲ್ಲ.

**11) ನೇಮಕಾತಿಗೆ ಅನರ್ಹತೆಗಳು**

ಯಾವುದೇ ವ್ಯಕ್ತಿಯು –

- ಭಾರತ ಪ್ರಜೆಯಲ್ಲದಿದ್ದರೆ **ಅನರ್ಹನಾಗಿದ್ದರೆ:**
- ನ್ಯಾಯಲಯದಲ್ಲಿ ಕ್ರಿಮಿನಲ್ ಅಪರಾಧಗಳಿಗಾಗಿ ಶಿಕ್ಷೆ ಹೊಂದಿದ್ದರೆ.
- ಭಾರತ ಸರ್ಕಾರದ ಅಥವಾ ರಾಜ್ಯ ಸರ್ಕಾರದ ಅಥವಾ ಶಾಸನಬದ್ಧ ನಿಗಮದ ಅಥವಾ ರಾಜ್ಯ ಅಥವಾ ಕೇಂದ್ರ ಸರ್ಕಾರದ ಸ್ವಾಮಿತ್ವದ ಸಾರ್ವಜನಿಕ ಉಧ್ಯಮಗಳ ಅಥವಾ ವಾಣಿಜ್ಯ / ಸಹಕಾರ ಉಧ್ಯಮಗಳ ಅಥವಾ ಸ್ಥಳೀಯ ಸಂಸ್ಥೆಗಳ ಅಥವಾ ಸಹಕಾರ ಸಂಘಗಳ ಅಥವಾ ಬೇರಾವುದೇ ಸಂಸ್ಥೆಯ ನೌಕರನಾಗಿದ್ದು, ಅವುಗಳ ಸೇವೆಯಿಂದ ವಜಾ ಮಾಡಲ್ಪಟ್ಟಿದ್ದರೆ.

- ಸಕ್ಷಮ ನ್ಯಾಯಲಯದಿಂದ ದಿವಾಳಿಯೆಂದು ಘೋಷಿಸಲ್ಪಟ್ಟ ವ್ಯಕ್ತಿ ಅಥವಾ ಅನುನ್ಮುಕ್ತ ದಿವಾಳಿ ಆಗಿದ್ದರೆ:
- ಮಾನಸಿಕ ಅಸ್ವಸ್ಥತೆ / ಖಿನ್ನತೆಗೆ ಒಳಗಾಗಿದ್ದರೆ
- ಕಾನೂನು ಬಾಹಿರ ನಿಕಾಯ ಅಥವಾ ಸಂಸ್ಥೆಯೊಂದಿಗೆ ಯಾವುದೇ ರೀತಿಯ ಸಂಪರ್ಕ ಹೊಂದಿದ್ದರೆ ಅಥವಾ ಸದಸ್ಯನಾಗಿದ್ದರೆ ಅಥವಾ ಅಂತಹ ಸಂಸ್ಥೆ / ನಿಕಾಯದ ಯಾವುದೇ ಚಟುವಟಿಕೆಯಲ್ಲಿ ಅಥವಾ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರೆ ಅಥವಾ ಸಂಪರ್ಕ ಹೊಂದಿದ್ದರೆ:
- ಭಾರತ ಸಂವಿಧಾನ ಮೌಲ್ಯಗಳ ಸರ್ವೋಚ್ಚತೆಗೆ ಬದ್ಧನಾಗಿರದೇ ಸಂವಿಧಾನವನ್ನು ಬುಡಮೇಲು ಮಾಡುವ ಗುರಿ ಹೊಂದಿದ್ದರೆ;
- ಭಾರತದ ಸಾರ್ವಬೌಮತ್ವ ಮತ್ತು ಅಖಂಡತೆ, ದೇ ಶದ ಭದ್ರತೆ, ರಾಜ್ಯದ ಭದ್ರತೆ, ಸಾರ್ವಜನಿಕ ಸುವ್ಯವಸ್ಥೆಗೆ ದಕ್ಕೆತರುವಂತಹ / ಭಂಗ ಮಾಡುವಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದರೆ:
- ದೇಶದ / ರಾಜ್ಯದ ವಿವಿಧ ವರ್ಗದ ಜನತೆಯ ನಡುವೆ ಧರ್ಮ, ಜನಾಂಗ, ಜಾತಿ, ಭಾಷೆ ಕೋಮು ಆಧಾರದ ಮೇಲೆ ಶತೃತ್ವ ಅಥವಾ ದ್ವೇಷದ ಭಾವನೆಗಳಿಗೆ ಪ್ರಚೋದಿಸುವ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರೆ:
- ಕೇಂದ್ರ ಅಥವಾ ಯಾವುದೇ ರಾಜ್ಯದ ಲೋಕಸೇವಾ ಆಯೋಗ ಅಥವಾ ಸ್ವಾಯತ್ತ / ನೇಮಕಾತಿ ಸಮಿತಿಗಳು ನಡೆಸುವ ಆಯ್ಕೆ ಅಥವಾ ಪರೀಕ್ಷೆಯಲ್ಲಿ ಪಾಲ್ಗೊಳ್ಳಲು ಖಾಯಂ ಆಗಿ ಬಹಿಷ್ಕೃತನಾಗಿದ್ದರೆ ಅಥವಾ ಅನರ್ಹತೆ ಹೊಂದಿದ್ದರೆ:
- ನೈತಿಕ ಅಧಃಪತನವನ್ನು ಒಳಗೊಂಡು ಯಾವುದೇ ಅಪರಾಧಕ್ಕಾಗಿ ಅಪರಾಧಿಯೆಂದು ದೋಷಿಯಾಗಿದ್ದರೆ ಅಥವಾ ನಿರ್ಣೀತವಾಗಿದ್ದರೆ;
- ವೈಧ್ಯಕೀಯವಾಗಿ ಅನರ್ಹನೆಂದು ಪರಿಗಣಿಸಲಾಗಿದ್ದರೆ / ಪರಿಗಣಿಸಲಾದರೆ.
- ಯಾವುದೇ ಅಭ್ಯರ್ಥಿಯು ಬ್ಯಾಂಕಿನ ಸೇವೆಗಳಿಗೆ ಅರ್ಜಿ ಹಾಕಿಕೊಳ್ಳಲು ಮತ್ತು ನೇಮಕಾತಿ ಪಡೆಯಲು ಹಾಗೂ ಬ್ಯಾಂಕಿನ ಸೇವೆಯಲ್ಲಿ ಮುಂದುವರೆಯಲು, ಮೇಲಿನ ಅನರ್ಹತೆಗಳನ್ನು ಹೊಂದಿರತಕ್ಕದ್ದಲ್ಲ. ಈ ನಿಬಂಧನೆಗಳಲ್ಲಿ ಉಕ್ತವಾಗಿ ಯಾವುದೇ ಅನರ್ಹತೆಗೆ ಒಳಗಾಗಿರುವುದು ಸಾಬೀತಾದಲ್ಲಿ, ಅಂತಹ ವ್ಯಕ್ತಿಯನ್ನು ತಕ್ಷಣದಿಂದ ಬ್ಯಾಂಕಿನ ಸೇವೆಯಿಂದ ತೆಗೆದುಹಾಕತಕ್ಕದ್ದು ಮತ್ತು ಆ ಬಗ್ಗೆ ಕ್ರಿಮಿನಲ್ ಕ್ರಮ ಕೈಗೊಳ್ಳಲು ಅವಕಾಶವಿರುತ್ತದೆ.

**12) ಸೇವಾ ಸೌಲಭ್ಯಗಳನ್ನು ನೀಡುವ ಬಗ್ಗೆ.**

- ಬ್ಯಾಂಕಿನ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳಿಗೆ ಬ್ಯಾಂಕು ಅನುಮೋದಿತ ಉಪವಿಧಿಗಳ ಸೇವಾ ನಿಬಂಧನೆಗಳ ಹಾಗೂ ವೃಂದ ಮತ್ತು ನೇಮಕಾತಿ ನಿಯಮಗಳು ಅನ್ವಯಿಸುತ್ತವೆ.
- ಬ್ಯಾಂಕಿನ ಹುದ್ದೆಗಳಿಗೆ ಆಯ್ಕೆಯಾಗುವ ಅಭ್ಯರ್ಥಿಗಳು ನೇಮಕಾತಿ ಪ್ರಕಟಣೆಯಲ್ಲಿ ತಿಳಿಸಿದ ವೇತನ ಶ್ರೇಣಿಯಲ್ಲಿ ಸೇವಾ ಸೌಲಭ್ಯವನ್ನು ಪಡೆಯಲು ಮಾತ್ರ ಅರ್ಹರಾಗಿರುತ್ತಾರೆ.
- ಬ್ಯಾಂಕಿನ ಹಿತ ದೃಷ್ಟಿಯಿಂದ ಬ್ಯಾಂಕಿನ ವ್ಯಾಪ್ತಿಯಲ್ಲಿನ ಯಾವುದೇ ಶಾಖೆ/ಪ್ರಧಾನ ಕಾರ್ಯಾಲಯದ ವಿಭಾಗದಲ್ಲಿ ಕೆಲಸ ಮಾಡಲು ಬದ್ದರಾಗಿರುತ್ತಾರೆ.
- ಅಭ್ಯರ್ಥಿಗಳ ಆಯ್ಕೆ ನಂತರ ಅರ್ಜಿಯ ಜೊತೆ ಸಲ್ಲಿಸಿರುವ ವಿಧ್ಯಾರ್ಹತೆ, ಮೀಸಲಾತಿ, ಜನ್ಮ ದಿನಾಂಕ ಮತ್ತು ಇತರೆ ದಾಖಲೆಗಳನ್ನು ಸಂಬಂಧಪಟ್ಟ ಸಂಸ್ಥೆ/ಪ್ರಾಧಿಕಾರ/ಶಾಲಾ/ಕಾಲೇಜು /ವಿಶ್ವವಿಧ್ಯಾನಿಲಯ ಗಳಿಂದ ನೈಜತೆಯ ಬಗ್ಗೆ ದೃಡೀಕರಿಸಿಕೊಳ್ಳುವ ಹಕ್ಕನ್ನು ಬ್ಯಾಂಕು

ಕಾಯ್ದಿರಿಸಿಕೊಂಡಿದೆ. ಸದರಿ ದಾಖಲೆ ಗಳ ಪರಿಶೀಲನೆಯಲ್ಲಿ ಯಾವುದಾದರೂ ನ್ಯೂನತೆ/ಸುಳ್ಳು/ ನಕಲು/ ದೋಷಪೂರಿತ ಅಂಶ ಎಂದು ಕಂಡುಬಂದಲ್ಲಿ ಯಾವುದೇ ಮುನ್ಸೂಚನೆ ನೀಡದೇ ಅಂತಹವರ ನೇಮಕಾತಿಯನ್ನು ರದ್ದುಪಡಿಸುವ / ಸೇವೆಯಿಂದ ವಜಾ ಗೊಳಿಸುವ ಹಾಗೂ ಕಾನೂನು ರೀತ್ಯಾ ಕ್ರಮ ಜರುಗಿಸಲಾಗುವುದು.

**13) <u>ದುರ್ನಡತೆ:</u>**

ಒಬ್ಬ ಅಭ್ಯರ್ಥಿಯು ನಕಲಿ ವ್ಯಕ್ತಿಯಾಗಿರುವನೆಂದು ಅಥವಾ ಖೋಟಾ ದಸ್ತಾವೇಜು ಅಥವಾ ತಿದ್ದಲಾದ ದಸ್ತಾವೇಜುಗಳನ್ನು ಸಲ್ಲಿಸಿರುವನೆಂದು ಅಥವಾ ತಪ್ಪು ಅಥವಾ ಸುಳ್ಳು ಹೇಳಿಕೆ ನೀಡಿರುವನೆಂದು ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿರುವನೆಂದು ಅಥವಾ ನೇಮಕಾತಿ ಉದ್ದೇಶಗಳಿಗಾಗಿ ನಡೆಸಲಾದ ಸಂದರ್ಶನದಲ್ಲಿ ಅನುಚಿತ ಮಾರ್ಗವನ್ನು ಅನುಸರಿಸುತ್ತಿರುವನೆಂದು ಅಥವಾ ಅನುಸರಿಸಲು ಪ್ರಯತ್ನಿಸುತ್ತಿರುವನೆಂದು ಅಥವಾ ಅವರ ನೇಮಕಾತಿಯು ಸಂಬಂದದಲ್ಲಿ ಯಾವುದೇ ಇತರೆ ಅಕ್ರಮ ಮತ್ತು ಅನುಚಿತ ಮಾರ್ಗವನ್ನು ಅವಲಂಬಿಸಿರುವನೆಂದು ಸಾಬೀತಾದಲ್ಲಿ ಅವನು / ಅವಳು ಸ್ವತಃ ಕ್ರಿಮಿನಲ್ ವ್ಯವಹಾರಗಳಿಗೆ ಮತ್ತು ಶಿಸ್ತು ಕ್ರಮಕ್ಕೆ ಒಳಪಡಿವುದಲ್ಲದೆ, ಹುದ್ದೆಯ ಸಂದರ್ಶನದಿಂದ / ಆಯ್ಕೆಯಿಂದ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು. ಅಂತಹ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ನೇಮಕಾತಿ ಪ್ರಕ್ರಿಯೆಯ ಸಂದರ್ಭದಲ್ಲಿ ಅಥವಾ ನೇಮಕಾತಿಯು ನಂತರವೂ ಖಾಯಂ ಆಗಿ ವಜಾ ಮಾಡಲಾಗುವುದು.

**<u>14)ಮೀಸಲಾತಿಗಳು</u>**

ಜಾತಿ/ವರ್ಗ ಮೀಸಲಾತಿ ಕೋರಬಯಸುವ ಅಭ್ಯರ್ಥಿಗಳು ಇದಕ್ಕೆ ಸಂಬಂಧಿಸಿದಂತೆ ಸರ್ಕಾರವು ನಿಗದಿಪಡಿಸಿರುವ ನಮೂನೆಗಳಲ್ಲಿ ಚಾಲ್ತಿಯಲ್ಲಿರುವ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗಾಗಿ ಪಡೆದು ಆನ್-ಲೈನ್ ಮೂಲಕ ಅಪ್‌ಲೋಡ್ ಮಾಡತಕ್ಕದ್ದು.

**14.1** ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡಕ್ಕೆ ಸೇರಿದ ಅಭ್ಯರ್ಥಿಯು --- ನಮೂನೆ-ಡಿ

**14.2** ಪ್ರವರ್ಗ-1ಕ್ಕೆ ಸೇರಿದ ಅಭ್ಯರ್ಥಿಯು --- ನಮೂನೆ-ಇ

**14.3** ಪ್ರವರ್ಗ-2ಎ ಪ್ರವರ್ಗ-2ಬಿ, ಪ್ರವರ್ಗ-3ಎ, ಪ್ರವರ್ಗ-3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ---ನಮೂನೆ- ಎಫ್

**14.4 ಗ್ರಾಮೀಣ ಅಭ್ಯರ್ಥಿಗಳಿಗೆ ಮೀಸಲಾತಿ**---ಗ್ರಾಮೀಣ ಮೀಸಲಾತಿಯಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿ ಇರುವ ನಿಯಮಗಳ ರಿತ್ಯ (1)ನೇಯ ತರಗತಿಯಿಂದ 10 ನೇಯ ತರಗತಿವರೆಗೆ ಗ್ರಾಮೀಣ ಮೀಸಲಾತಿಗೆ ಒಳಪಡುವ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾದಲ್ಲಿ ಮಾತ್ರ ಈ ಮೀಸಲಾತಿಯನ್ನು ಪಡೆಯಲು ಅರ್ಹರು.ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಾಮಾನ್ಯ *ಅರ್ಹತೆಯ ಅಭ್ಯರ್ಥಿಗಳು ನಮೂನೆ(2)* ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲುರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ *ಸೇರಿಲ್ಲದಿರುವ ಬಗ್ಗೆ ನಮೂನೆ -1ರಲ್ಲಿ ಪ್ರಮಾಣ* ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.ಅಂತೆಯೇ ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಪ್ರವರ್ಗ-1, 2ಎ, 2ಬಿ,3ಎ, 3ಬಿ ಮೀಸಲಾತಿಗೆ ಸೇರಿದ ಅಭ್ಯರ್ಥಿಗಳು ಕಡ್ಡಾಯವಾಗಿ ಗ್ರಾಮೀಣ ಮೀಸಲಾತಿಯ ಪ್ರಮಾಣ ಪತ್ರವನ್ನು ನಮೂನೆ-2ರಲ್ಲಿ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲು ರುಜು, ಮೊಹರು ಮತ್ತು ಜಾರಿಮಾಡಿದ ದಿನಾಂಕದೊಂದಿಗೆ

ನಿಗಧಿತ ನಮೂನೆಯೊಂದಿಗೆ ಪಡೆದಿಟ್ಟುಕೊಂಡಿರತಕ್ಕದ್ದು. ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಚಾಲ್ತಿಯಲ್ಲಿರುವ ಮೀಸಲಾತಿ ಪ್ರಮಾಣ ಪತ್ರದ ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಗ್ರಾಮೀಣ ಮೀಸಲಾತಿಗೆ ಪರಿಗಣಿಸಲಾಗುವುದಿಲ್ಲ.ಒಂದು ವೇಳೆ ಅಭ್ಯರ್ಥಿಗಳ ಮೀಸಲಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ, ಅಂತಹವರು ಗ್ರಾಮೀಣ ಮೀಸಲಾತಿಗೆ ಸಹ ಅನರ್ಹರಾಗುತ್ತಾರೆ.

14.5 **ಅಂಗವಿಕಲ ಅಭ್ಯರ್ಥಿಗಳಿಗೆ ಮೀಸಲಾತಿ :** ಅಂಗವಿಕಲ ಮೀಸಲಾತಿ ಅಡಿ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ ಸಕ್ಷಮ ವೈದ್ಯಕೀಯ ಪ್ರಾಧಿಕಾರದಿಂದ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿರತಕ್ಕದ್ದು.ಮೂಲ ಪ್ರತಿಯನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಅಂಗವಿಕಲ ಮೀಸಲಾತಿಗೆ ಪರಿಗಣಿಸಲಾಗುವುದಿಲ್ಲ. ಇತರೆ ಯಾವುದೇ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಪಡೆಯಲಾಗಿರುವ ಪ್ರಮಾಣ ಪತ್ರಗಳನ್ನು/ಗುರುತಿನ ಚೀಟಿಯ ಪ್ರತಿಗಳನ್ನು ಪರಿಗಣಿಸಲು ಬರುವುದಿಲ್ಲ. ಶೇ.40%ಕ್ಕಿಂತ ಕಡಿಮೆ ಇಲ್ಲದಂತಹ ಅಂಗವಿಕಲತೆಯುಳ್ಳ ಅಭ್ಯರ್ಥಿಗಳು ಮಾತ್ರ ಈ ಮೀಸಲಾತಿಯನ್ನು ಕೋರಲು ಅರ್ಹರು.

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ272ಸೇನೆನಿ2013 ದಿನಾಂಕ:11–02–2021ರನ್ವಯ ಎದ್ದು ಕಾಣುವ ಅಂಗವಿಕಲತೆ(Benchmark Disabilities)ಅಥವಾ ನಿರ್ದಿಷ್ಟಪಡಿಸಿದ ಅಂಗವಿಕಲತೆ (Specified Disabilities)ಅಭ್ಯರ್ಥಿಗಳು ಅರ್ಜಿ ಸಲ್ಲಿಸುವ ಸಮಯದಲ್ಲಿ ಅಂಗವಿಕಲತೆಯ ಸಂಬಂಧಿಸಿದ ಮೀಸಲಾತಿಯನ್ನು ಕೋರಿ ಅಂಗವಿಕಲತೆಯ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡತಕ್ಕದ್ದು.ಹಾಗೂ ಇತರೆ ಎದ್ದು ಕಾಣುವ ಅಂಗವಿಕಲತೆಯ ಹೊಂದಿರುವ ಅಭ್ಯರ್ಥಿಗಳು ಪರೀಕ್ಷೆಯನ್ನು ಬರೆಯಲು ಲಿಪಿಕಾರರ ಸಹಾಯ ಬೇಕಿದ್ದಲ್ಲಿ ದೈಹಿಕ ಅಸಮರ್ಥತೆ ಹೊಂದಿರುವ ಬಗ್ಗೆ ವೈದ್ಯಕೀಯ ಮಂಡಳಿಯಿಂದ ಅನುಬಂಧ–01ರಲ್ಲಿ ಪಡೆದ ಪ್ರಮಾಣ ಪತ್ರವನ್ನು ಅಪ್‌ಲೋಡ್ ಮಾಡತಕ್ಕದ್ದು.ತನ್ನದೇ ಆದ ಲಿಪಿಕಾರರ ಸೇವೆಯನ್ನು ಪಡೆಯಲು ಇಚ್ಛಿಸುವ ಅಭ್ಯರ್ಥಿಗಳು ಅನುಬಂಧ–01 ಮತ್ತು ಅನುಬಂಧ–02ರಲ್ಲಿ ಪಡೆದ ಪ್ರಮಾಣ ಪತ್ರಗಳನ್ನು ಅರ್ಜಿಯೊಂದಿಗೆ ಅಪ್‌ಲೋಡ್ ಮಾಡತಕ್ಕದ್ದು. ಈ ಸಂಬಂಧ ಅರ್ಜಿ ಸಲ್ಲಿಸುವ ಸಮಯದಲ್ಲಿ ಲಿಪಿಕಾರರ ಅವಶ್ಯಕತೆ ಇರುವ ಬಗ್ಗೆ ಅರ್ಜಿಯಲ್ಲಿನ ನಿಗಧಿತ ಅಂಕಣದಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು.ಸ್ಪರ್ಧಾತ್ಮಕ ಪರೀಕ್ಷೆಯ ಪ್ರತಿ ಒಂದು ಗಂಟೆಯ ಪರೀಕ್ಷೆಗೆ ಹೆಚ್ಚುವರಿಯಾಗಿ 20 ನಿಮಿಷಗಳ ಕಾಲಾವಕಾಶವನ್ನು ನೀಡಲಾಗುವುದು.(ಅನುಬಂಧ–01 ಮತ್ತು 02 ರ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ.)ಅರ್ಜಿಯಲ್ಲಿ ಲಿಪಿಕಾರರ ಸೇವೆಯನ್ನು ಒದಗಿಸುವಂತೆ ಆಯ್ಕೆ ಸಮಿತಿಗೆ ಕೋರಿದ್ದಲ್ಲಿ ಅವಶ್ಯಕತೆಯ ಅನುಸಾರ ಲಿಪಿಕಾರರನ್ನು ಒದಗಿಸಲು ಮಾಡುವಂತೆ ಸಂಬಂಧಿತ ಪರಿಕ್ಷಾ ಉಪಕೇಂದ್ರದ ಮುಖ್ಯಸ್ಥರನ್ನು ಕೋರಲಾಗುವುದು.

14.6 **ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ಮೀಸಲಾತಿ:** ಕನ್ನಡ ಮಾಧ್ಯಮದ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವಂತಹ ಅಭ್ಯರ್ಥಿಗಳು ಚಾಲ್ತಿಯಲ್ಲಿರುವ ನಿಯಮಗಳ ರೀತ್ಯಾ 1 ನೇ ತರಗತಿಯಿಂದ 10ನೇ ತರಗತಿಯವರೆಗೆ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುವ ಬಗ್ಗೆ ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ, ಜಾರಿ ದಿನಾಂಕ ಹಾಗೂ ಮೊಹರಿನೊಂದಿಗೆ ಪ್ರಮಾಣ ಪತ್ರವನ್ನು ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದೊಳಗೆ ಪಡೆದಿಟ್ಟುಕೊಂಡಿರತಕ್ಕದ್ದು ಹಾಗೂ ಮೂಲ ದಾಖಲಾತಿ ಪರಿಶೀಲನೆಗೆ ಅರ್ಹರಾದಾಗ ಇದೇ ಪ್ರಮಾಣ ಪತ್ರಗಳ ಮೂಲ ಪ್ರತಿಗಳನ್ನು ಪರಿಶೀಲನೆಗೆ ತಪ್ಪದೇ ಹಾಜರುಪಡಿಸತಕ್ಕದ್ದು. ತಪ್ಪಿದಲ್ಲಿ ಅಂತಹ ಅಭ್ಯರ್ಥಿಗಳ ಕನ್ನಡ ಮಾಧ್ಯಮ ಅಭ್ಯರ್ಥಿ ಮೀಸಲಾತಿಗೆ ಪರಿಗಣಿಸಲಗುವುದಿಲ್ಲ.

14.7 **ಅನುಚ್ಛೇದ 371(ಜೆ)ರಂತೆ ಕಲ್ಯಾಣ-ಕರ್ನಾಟಕ ಸೇರಿದ ಅಭ್ಯರ್ಥಿಗಳಿಗೆ ಮೀಸಲಾತಿ :** ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಅರ್ಹತಾ) ಪ್ರಮಾಣ ಪತ್ರಗಳ ನೀಡಿ ನಿಯಮಗಳು 2013ಕ್ಕೆ ಸಂಬಂಧಿಸಿದಂತೆ ನೇರ ನೇಮಕಾತಿಯಲ್ಲಿ ಸ್ಥಳೀಯ ವ್ಯಕ್ತಿಯೆಂಬ ಮೀಸಲಾತಿಯನ್ನು ಕೋರುವ ಅಭ್ಯರ್ಥಿಗಳು ನಿಗಧಿತ ನಮೂನೆಯಲ್ಲಿಯೇ ಅರ್ಹತಾ ಪ್ರಮಾಣ ಪತ್ರವನ್ನು ಸಕ್ಷಮ ಪ್ರಾಧಿಕಾರವಾದ ಸಂಬಂಧಪಟ್ಟ ಉಪವಿಭಾಗದ ಸಹಾಯಕ ಆಯುಕ್ತರಿಂದ ಅರ್ಜಿಗಳನ್ನು ಸಲ್ಲಿಸಲು ನಿಗಧಿಪಡಿಸಿದ ಕೊನೆಯ ದಿನಾಂಕಗೊಳಗೆ ಪಡೆದಿಟ್ಟುಕೊಳ್ಳತಕ್ಕದ್ದು ಹಾಗೂ ಇದರ ಪ್ರತಿಯನ್ನು ಆನ್‌ಲೈನ್ ಅರ್ಜಿಯೊಂದಿಗೆ ಅಪ್ ಲೋಡ್ ಮಾಡತಕ್ಕದ್ದು.ಈ ಪ್ರಮಾಣ ಪತ್ರದ ನಮೂನೆಯನ್ನು ಅನುಬಂಧದಲ್ಲಿ ತೋರಿಸಲಾಗಿದೆ.ಈ ನಮೂನೆಯನ್ನು ಹೊರತುಪಡಿಸಿ ಇತರೆ ಯಾವುದೇ ನಮೂನೆಯಲ್ಲಿ ಪಡೆಯಲಾದ ಅರ್ಹತಾ ಪ್ರಮಾಣ ಪತ್ರವನ್ನು ಪರಿಗಣಿಸಲಾಗುವುದಿಲ್ಲ.

14.8 _**ಮಾಜಿ ಸೈನಿಕ ಅಭ್ಯರ್ಥಿಗಳಿಗೆ ಮೀಸಲಾತಿ :** ಮಾಜಿ ಸೈನಿಕ ಅಂದರೆ ಕೇಂದ್ರ ಸಶಸ್ತ್ರ ದಳಗಳಾದ ಭೂದಳ, ನೌಕಾದಳ ಮತ್ತು ವಾಯುದಳಗಳಲ್ಲಿ ಯಾವುದೇ ಶ್ರೇಣೀಯಲ್ಲಿ(ಯೋಧ ಅಥವಾ ಯೋಧನಲ್ಲದ) ಸೇವೆ ಸಲ್ಲಿಸಿದ ವ್ಯಕ್ತಿ. ಆದರೆ ಡಿಫೆನ್ಸ ಸೆಕ್ಯೂರಿಟಿ ಕೊರ್, ಜನರಲ್ ರಿಜರ್ವ ಇಂಜಿನಿಯರಿಂಗ್ ಫೋರ್ಸ, ಲೋಕ ಸಹಾಯಕ ಸೇನಾ ಮತ್ತು ಪ್ಯಾರಾ ಮಿಲಿಟಿರಿ ದಳದಲ್ಲಿ ಸೇವೆ ಸಲ್ಲಿಸಿದ ವ್ಯಕ್ತಿ ಸೇರ್ಪಡೆಯಾಗುವುದಿಲ್ಲ. ಮತ್ತು

1.ಅಂತಹ ಸೇವೆಯಿಂದ ನಿವೃತ್ತಿ ಹೊಂದಿದ ನಂತರ ನಿವೃತ್ತಿ ವೇತನ ಪಡೆಯುತ್ತಿರುವ ವ್ಯಕ್ತಿ. ಅಥವಾ
2.ವೈದ್ಯಕೀಯ ಕಾರಣಗಳಿಂದ ಮಿಲಿಟರಿ ಸೇವೆಗೆ ಅನರ್ಹನಾದವ ಅಥವಾ ವ್ಯಕ್ತಿಯ ಹಿಡಿತಕ್ಕೂ ಮೀರಿದ ಪರಿಸ್ಥಿಗಳಿಂದ ಮತ್ತು ವೈದ್ಯಕೀಯ ಅಥವಾ ಅಸಾಮರ್ಥ್ಯದ ಪಿಂಚಣಿ ಪಡೆದು ಸೇವೆಯಿಂದ ಬಿಡುಗಡೆಯಾದ ವ್ಯಕ್ತಿ. ಅಥವಾ
3.ಸ್ವಂತ ಕೋರಿಕೆ ಹೊರತುಪಡಿಸಿ ಸಿಬ್ಬಂದಿ ಕಡಿತದ ಪರಿಣಾಮದಿಂದ ಅಂತಹ ಸೇವೆಯಿಂದ ಬಿಡುಗಡೆ ಹೊಂದಿದ ವ್ಯಕ್ತಿ. ಅಥವಾ
4.ಸ್ವಂತ ಕೋರಿಕೆ ಮೇರೆಗೆ ಅಥವಾ ದುರ್ನಡತೆ ಅಥವಾ ಅಸಾಮರ್ಥ್ಯದ ಕಾರಣದಿಂದಾಗಿ ತೆಗೆದುಹಾಕಿರುವ ಅಥವಾ ಕರ್ತವ್ಯದಿಂದ ವಜಾ ಮಾಡಿದ ವ್ಯಕ್ತಿಗಳನ್ನು ಹೊರತುಪಡಿಸಿ, ನಿರ್ದಿಷ್ಟ ಅವಧಿಯನ್ನು ಪೂರೈಸಿದ ತರುವಾಯ ಬಿಡುಗಡೆ ಹೊಂದಿದ ವ್ಯಕ್ತಿ ಮತ್ತು ಗ್ರಾಚ್ಯೂಟಿ ಪಡೆದಿರುವ ವ್ಯಕ್ತಿ.ಪ್ರಾಂತೀಯ ಸೇವೆಯ ಈ ಕೆಳಗೆ ಹೆಸರಿಸಿದ ವರ್ಗದ ಸಿಬ್ಬಂದಿ.
ಎ.ನಿರಂತರ ಸೇವೆ ಸಲ್ಲಿಸಿ ನಿವೃತ್ತ ಹೊಂದಿದ ಪಿಂಚಣಿದಾರರು
ಬಿ.ಮಿಲಿಟರಿ ಸೇವೆಯಿಂದ ಉಂಟಾದ ದೈಹಿಕ ಅಸಾಮರ್ಥ್ಯತೆ ಹೊಂದಿ ಬಿಡುಗಡೆಯಾದ ವ್ಯಕ್ತಿ
ಸಿ.ಗ್ಯಾಲಂಟ್ರಿ ಪ್ರಶಸ್ತಿ ವಿಜೇತರು.

**ವಿವರಣೆ:**

ಎ) ಕೇಂದ್ರ ಸಶಸ್ತ್ರದಳದ ಸೇವೆಯಲ್ಲಿ ವ್ಯಕ್ತಿಗಳು ಸೇವೆಯಿಂದ ನಿವೃತ್ತಿ ಹೊಂದಿದ ನಂತರ ಮಾಜಿ ಸೈನಿಕರ ವರ್ಗದಡಿ ಬರುವ ವ್ಯಕ್ತಿಗೆ ಒಪ್ಪಂದವು ಪೂರ್ಣವಾಗಲು ಒಂದು ವರ್ಷಕ್ಕೆ ಮುನ್ನ ಪುನರ್ ಉದ್ಯೋಗಕ್ಕೆ ಅರ್ಜಿ ಹಾಕಿಕೊಳ್ಳಲು ಹಾಗೂ ಅವರಿಗೆ ಮಾಜಿ ಸೈನಿಕರಿಗೆ ದೊರೆಯುವ ಎಲ್ಲಾ ಸೌಲಭ್ಯಗಳನ್ನು ಹೊಂದಲು ಅನುಮತಿ ನೀಡಲಾಗಿದೆ.ಆದರೇ ಸಮವಸ್ತ್ರವನ್ನು ತ್ಯಜಿಸಲು ಅನುಮತಿ ನೀಡುವವರೆಗೆ ಹುದ್ದೆಗಳಿಗೆ ನೇಮಕ ಹೊಂದುವಂತಿಲ್ಲ.ಸೈನಿಕರ ಸೇವಾ ಒಪ್ಪಂದದ ಮುಕ್ತಾಯಕ್ಕೆ ಮುನ್ನ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಅವರ ಮೇಲಾಧಿಕಾರಿಗಳಿಂದ ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಪಡೆದು ಅದರ ಮೂಲ ಪ್ರತಿಯನ್ನು ಕಡ್ಡಾಯವಾಗಿ ಹಾಜರು ಪಡಿಸತಕ್ಕದ್ದು.

ಬಿ)ಕೇಂದ್ರ ಸಶಸ್ತ್ರ ದಳಗಳಲ್ಲಿ ಸೇವೆ ಸಲ್ಲಿಸುವಾಗ ಕೊಲ್ಲಲ್ಪಟ್ಟ ಅಥವಾ ಶಾಶ್ವತವಾಗಿ ದೈಹಿಕ ವಿಕಲತೆ ಹೊಂದಿದ ವ್ಯಕ್ತಿಗಳ ಕುಟುಂಬದವರು(ಸಂದಾರ್ಭಾನುಸಾರ ಪತ್ನಿ ಅಥವಾ ಪತಿ ಮತ್ತು ಮಕ್ಕಳು ಮತ್ತು ಮಲ ಮಕ್ಕಳು) ಮಾಜಿ ಸೈನಿಕ ಮೀಸಲಾತಿ ಪಡೆಯಲು

ಅರ್ಹರಿರುತ್ತಾರೆ.ಆದರೆ ಅಂತಹವರುಗಳು ವಯೋಮಿತಿ ಸಡಿಲಿಕೆಯನ್ನು ಪಡೆಯಲು ಅರ್ಹರಿರುವುದಿಲ್ಲ.

ಸೇನೆಯಿಂದ ಬಿಡುಗಡೆಯಾದವ್ಯಕ್ತಿಗಳು ಅವರ ಬಿಡುಗಡೆ ಪ್ರಮಾಣ ಪತ್ರವನ್ನು (ಗುರುತಿನ ಚೀಟಿ, ನಿವೃತ್ತ ವೇತನ ಸಂದಾಯದ ಪತ್ರ, ಬಿಡುಗಡೆ ಪುಸ್ತಕ ಮತ್ತು ಪದವಿ ಪ್ರಮಾಣ ಪತ್ರ)/ಮಾಜಿ ಸೈನಿಕರ ಅವಲಂಬಿತರು ಮಾಜಿ ಸೈನಿಕರು ಸೇವೆಯಲ್ಲಿದ್ದಾಗ ಯುದ್ಧ/ಯುದ್ಧದಂತಹ ಕಾರ್ಯಚರಣೆಯಲ್ಲಿ ಮಡಿದ ಅಥವಾ ಶಾಶ್ವತ ಅಂಗವಿಕತೆ ಹೊಂದಿದ ಬಗ್ಗೆ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರತಕ್ಕದ್ದು.

ಮಾಜಿ ಸೈನಿಕರ ಅವಲಂಬಿತರು ಮಾಜಿ ಸೈನಿಕರು ಸೇವೆಯಲ್ಲಿದ್ದಾಗ ಯುದ್ಧ/ಯುದ್ಧದಂತಹ ಕಾರ್ಯಚರಣೆಯಲ್ಲಿ ಮಡಿದ ಅಥವಾ ಶಾಶ್ವತ ಅಂಗವಿಕತೆ ಹೊಂದಿದ ಪ್ರಮಾಣ ಪತ್ರದ ನಮೂನೆಯನ್ನು ಅಧಿಸೂಚನೆಯ ಕೊನೆಯಲ್ಲಿ ತೋರಿಸಲಾಗಿದೆ.

**15) _ವಿಶೇಷ ಸೂಚನೆಗಳು:**

1. ಅಭ್ಯರ್ಥಿಗಳು ಅರ್ಜಿಗಳನ್ನು ಭರ್ತಿ ಮಾಡುವ ಮೊದಲು ಎಲ್ಲಾ ವಿವರಗಳನ್ನು ಓದಿ ಅರ್ಥೈಸಿಕೊಂಡು ಆನಂತರವೇ ತಮಗೆ ಅನ್ವಯವಾಗುವ ವಿವರಗಳನ್ನು ಭರ್ತಿ ಮಾಡತಕ್ಕದ್ದು.
2. ಒಮ್ಮೆ ಅರ್ಜಿ ಸಲ್ಲಿಸಿದ ನಂತರ ಅರ್ಜಿಯಲ್ಲಿ ವಿವರಗಳನ್ನು ತಿದ್ದುಪಡಿ/ಸೇರ್ಪಡೆ ಮಾಡುವಂತೆ ನೀಡುವ ಯಾವುದೇ ಮನವಿಯನ್ನು ತಿರಸ್ಕರಿಸಲಾಗುವುದು.
3. ಅಭ್ಯರ್ಥಿಗಳು ವಯೋಮಿತಿ,ವಿದ್ಯಾರ್ಹತೆಗೆ ಸಂಬಂಧಿಸಿದ ಪ್ರಮಾಣಪತ್ರಗಳನ್ನು ಹಾಗೂ ಅರ್ಜಿಯಲ್ಲಿ ಕೋರಿರುವ ಎಲ್ಲಾ ಮೀಸಲಾತಿ ಪ್ರಮಾಣ ಪತ್ರ/ಇತರೆ ಪ್ರಮಾಣಪತ್ರಗಳನ್ನು ತಮ್ಮ ಹೆಸರಿನಲ್ಲಿಯೇ ಅರ್ಜಿ ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಚಾಲ್ತಿಯಲ್ಲಿರುವಂತೆ ಅಧಿಸೂಚನೆಯ ಅನುಬಂಧಗಳಲ್ಲಿ ಸೂಚಿಸಿರುವ ನಮೂನೆಗಳಲ್ಲಿಯೇ ಕಡ್ಡಾಯವಾಗಿ ಪಡೆದಿಟ್ಟುಕೊಂಡು ಸದರಿ ದಾಖಲೆಗಳನ್ನು ಅರ್ಜಿ ಸಲ್ಲಿಸುವಾಗ ಅಪ್–ಲೋಡ್ ಮಾಡತಕ್ಕದ್ದು.(ದಾಖಲೆಗಳು ಸ್ಪಷ್ಟವಾಗಿರಬೇಕು) ತಪ್ಪಿದ್ದಲ್ಲಿ ಅವರ ಮೀಸಲಾತಿ/ ಅಭ್ಯರ್ಥಿತ್ವವನ್ನು ತಿರಸ್ಕರಿಸಲಾಗುವುದು.
4. ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಮೀಸಲಾತಿಯನ್ನು ಕೋರದೆ ತದ ನಂತರದಲ್ಲಿ ಮೀಸಲಾತಿಯನ್ನು ಪರಿಗಣಿಸುವಂತೆ ಕೋರಿ ಸಲ್ಲಿಸುವ ಮನವಿ/ದಾಖಲೆಗಳನ್ನು ಪರಿಗಣಿಸಲಾಗುವುದಿಲ್ಲ.
5. ಪ್ರಶ್ನೆಪತ್ರಿಕೆ ಬಗ್ಗೆ ಯಾವುದೇ ಬಗೆಯ ಆಕ್ಷೆಪಣೆ ಇದ್ದಲ್ಲಿ ಪರೀಕ್ಷಾ ಕೇಂದ್ರವನ್ನು ಬಿಡುವ ಮೊದಲೇ ಪರೀಕ್ಷಾ ದಿನವೇ ಸಂಬಂಧಿದ ಮೇಲ್ವಿಚಾರಕರ ಮುಖಾಂತರ ಲಿಖಿತ ಮನವಿಯನ್ನು ಸದಸ್ಯ ಕಾರ್ಯದರ್ಶಿ, ಸಿಬ್ಬಂದಿ ನೇಮಕಾತಿ ಸಮಿತಿ ಇವರಿಗೆ ಸಲ್ಲಿಸಿ ಸ್ವೀಕೃತಿ (Acknowledgement) ಪಡೆಯಬೇಕು. ಪರೀಕ್ಷಾ ಕೇಂದ್ರ ಬಿಟ್ಟ ನಂತರ ಕಳುಹಿಸಿದ ಯಾವುದೇ ಆಕ್ಷೇಪಣೆಗಳನ್ನು ಮಾನ್ಯ ಮಾಡಲು ಬರುವುದಿಲ್ಲ.

**16) ದಾಖಲಾತಿ ಪರಿಶೀಲನೆ ಅನುಬಂಧಗಳು:ಮೀಸಲಾತಿ ಬಯಸುವ ಅಭ್ಯರ್ಥಿಗಳು ಸಂಭಂಧಪಟ್ಟ ಪ್ರಾಧಿಕಾರಿಗಳಿಂದ ನಿಗಧಿಪಡಿಸಿದ ನಮೂನೆಯಲ್ಲಿ ಒದಗಿಸತ್ತಕ್ಕದ್ದು.**

1. **ಅನುಬಂಧ---01ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಪರಿಶಿಷ್ಠ ಜಾತಿ ಮೀಸಲಾತಿ ಕೋರಿರುವ ಅಭ್ಯರ್ಥಿಯು ನಿಗದಿತ ನಮೂನೆ–ಡಿ ನಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. .
2. **ಅನುಬಂಧ---02ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಪರಿಶಿಷ್ಠ ಪಂಗಡ ಮೀಸಲಾತಿ ಕೋರಿರುವ ಅಭ್ಯರ್ಥಿಯು ನಿಗದಿತ ನಮೂನೆ–ಡಿ ನಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
3. **ಅನುಬಂಧ---03 ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಪ್ರವರ್ಗ–1, ಮೀಸಲಾತಿ ಕೋರಿರುವ ಅಭ್ಯರ್ಥಿಯು ನಿಗದಿತ ನಮೂನೆ–ಇ ನಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. .
4. **ಅನುಬಂಧ---04 ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಪ್ರವರ್ಗ–2ಎ ಪ್ರವರ್ಗ–2ಬಿ, ಪ್ರವರ್ಗ–3ಎ, ಪ್ರವರ್ಗ–3ಬಿ ಮೀಸಲಾತಿ ಕೋರುವ ಅಭ್ಯರ್ಥಿಯು ನಿಗದಿತ ನಮೂನೆ– ಎಫ್ ನಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. .
5. **ಅನುಬಂಧ---05 (ನಮೂನೆ–1 ಮತ್ತು ನಮೂನೆ 2)ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಗ್ರಾಮೀಣ ಮೀಸಲಾತಿ ಪ್ರಮಾಣ ಪತ್ರ ನಮೂನೆ–2ನ್ನು

ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. ಗ್ರಾಮೀಣ ಅಭ್ಯರ್ಥಿಗಳಿಗೆಂದು ಮೀಸಲಿರಿಸಿದ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಸಾಮಾನ್ಯ *ಅರ್ಹತೆಯ ಅಭ್ಯರ್ಥಿಗಳು ನಮೂನೆ(2)* ನ್ನು ಸಂಬಂಧಪಟ್ಟ ಶಾಲೆಯ ಮುಖ್ಯೋಪಾಧ್ಯಾಯರ ಸಹಿ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಯವರ ಮೇಲುರುಜುವಿನೊಂದಿಗೆ ಹಾಗೂ ಈ ಪ್ರಮಾಣ ಪತ್ರವಲ್ಲದೇ ಮೇಲುಸ್ಥರಕ್ಕೆ *ಸೇರಿಲ್ಲದಿರುವ ಬಗ್ಗೆ ನಮೂನೆ –1ರಲ್ಲಿ ಪ್ರಮಾಣ* ಪತ್ರವನ್ನು ಕಡ್ಡಾಯವಾಗಿ ಸಂಬಂಧಿತ ಪ್ರಾಧಿಕಾರದಿಂದ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕದೊಳಗೆ ಪಡೆದಿರಬೇಕು.

6. **ಅನುಬಂಧ–––06 ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಕನ್ನಡ ಮಾಧ್ಯಮ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
7. **ಅನುಬಂಧ–––07(ನಮೂನೆ–1)ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಅಂಗವಿಕಲ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು. **ಅನುಬಂಧ–––07(ನಮೂನೆ–2,3)ದೈಹಿಕ ಅಸಮರ್ಥತೆ ಹೊಂದಿದ ಅಭ್ಯರ್ಥಿಗಳು ಸಲ್ಲಿಸಬೇಕಾದ** ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
8. **ಅನುಬಂಧ–––08 ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಕಲ್ಯಾಣ ಕರ್ನಾಟಕ ಪ್ರದೇಶದ ಅಭ್ಯರ್ಥಿಗಳ ಮೀಸಲಾತಿಗೆ ಸಂಬಂಧಿಸಿದ ಅನುಬಂಧ–ಎ ಮತ್ತು ಬಿ ನಿಗದಿಪಡಿಸಿದ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
9. **ಅನುಬಂಧ–––09 (ನಮೂನೆ–1 &2) ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ಮಾಜಿ ಸೈನಿಕರ ಮೀಸಲಾತಿ ಬಯಸುವ ಅಭ್ಯರ್ಥಿಗಳು ನಿಗದಿಪಡಿಸಿದ ನಮೂನೆಯಲ್ಲಿ ಸಕ್ಷಮ ಪ್ರಾಧಿಕಾರದಿಂದ ಪಡೆದಿರುವ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
10. **ಅನುಬಂಧ–––10 ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ನಡತೆ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದ್ದು.
11. **ಅನುಬಂಧ–––11 ರಲ್ಲಿ ನೀಡಲಾದ ನಿಗಧಿತ ನಮೂನೆಯಲ್ಲಿ** ನಿರಾಕ್ಷೇಪಣಾ ಪ್ರಮಾಣ ಪತ್ರವನ್ನು ಸಲ್ಲಿಸತಕ್ಕದು

ಅರ್ಜಿಗಳನ್ನು ಸಲ್ಲಿಸುವ ವಿಧಾನ ಆನ್–ಲೈನ್ ಲಿಂಕ ಮೂಲಕ https://tascguru.com/raichur-dcc-bank/ ಸಲ್ಲಿಸತಕ್ಕದ್ದು,ಬೇರೆ ಯಾವುದೇ ರೂಪದಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗುವುದಿಲ್ಲ.ಅರ್ಜಿ ಸಲ್ಲಿಸುವುದಕ್ಕೆ ಸಂಬಂಧಿಸಿದಂತೆ ತೊಂದರೆಗಳು ಎದುರಾದಲ್ಲಿ ಅಭ್ಯರ್ಥಿಗಳು ಹೆಲ್ಪಲೈನ್ ನಂಬರ್ :8310460727 ಇದಕ್ಕೆ ಸಂಪರ್ಕಿಸುವುದು.

ಸಿಬ್ಬಂದಿ ನೇಮಕಾತಿ ಸಮಿತಿ ಅನುಮೋದನೆ ಮೇರೆಗೆ

21/11/2025

(ಎಂ.ಬಿ.ಪೂಜಾರ)
ಸದಸ್ಯ ಕಾರ್ಯದರ್ಶಿ ಸಿಬ್ಬಂದಿ ನೇಮಕಾತಿ ಸಮಿತಿ ಹಾಗೂ
ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳು,
ಆರ್.ಕೆ.ಡಿ.ಸಿ.ಸಿ ಬ್ಯಾಂಕ್ ನಿ,ರಾಯಚೂರು

## ಅನುಬಂಧ–1 ಮತ್ತು 2

(ಪ.ಜಾ/ಪ.ಪಂ ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

ನಮೂನೆ–ಡಿ

(ನಿಯಮ 3ಎ (2) (3) ನೋಡಿ)

ಅನುಸೂಚಿತ ಅಥವಾ ಅನುಸೂಚಿತ ಬುಡಕಟ್ಟುಗಳಿಗೆ (ಪ.ಜಾ/ಪ.ಪಂ) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

**ಪ್ರಮಾಣ ಪತ್ರ**

______________ರಾಜ್ಯದ / ಕೇಂದ್ರಾಡಳಿತ ಪ್ರದೇಶದ ______________ಜಿಲ್ಲೆಯ /ವಿಭಾಗದ ______________ ಗ್ರಾಮ/ಪಟ್ಟಣದ * ನಿವಾಸಿಯಾದ ಶ್ರೀ/ಶ್ರೀಮತಿ______________ ಎಂಬುವವರ ಮಗ / ಮಗಳಾದ / ಶ್ರೀ/ಶ್ರೀಮತಿ______________ ಇವರುಅನುಸೂಚಿತಜಾತಿ / ಅನುಸೂಚಿತ ಬುಡಕಟ್ಟು * ಎಂದು ಮಾನ್ಯ ಮಾಡಲಾಗಿರುವಜಾತಿ / ಬುಡಕಟ್ಟುಗೆ * ಸೇರಿರುತ್ತಾರೆಂದು ಪ್ರಮಾಣಿಕರಿಸಿದೆ.

- ಸಂವಿಧಾನ (ಅನುಸೂಚಿತ ಜಾತಿಗಳು) ಆದೇಶ 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) ಆದೇಶ 1950
- ಸಂವಿಧಾನ (ಅನುಸೂಚಿತಜಾತಿ) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1950
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಕೇಂದ್ರಾಡಳಿತ ಪ್ರದೇಶಗಳು) ಆದೇಶ, 1951
- ಅನುಸೂಚಿತ ಜಾತಿ ಮತ್ತು ಅನುಸೂಚಿತ ಬುಡಕಟ್ಟುಗಳ ಪಟ್ಟಿ (ಮಾರ್ಪಡು) ಆದೇಶ 1956, ಮುಂಬಯಿ ರಾಜ್ಯ ಪುನರ್‌ರಚನಾ ಅಧಿನಿಯಮ 1960, ಪಂಜಾಬ್ ರಾಜ್ಯ ಪುನರ್ ರಚನಾ ಅಧಿನಿಯಮ 1966, ಹಿಮಾಚಲ ಪ್ರದೇಶ ರಾಜ್ಯ ಅಧಿನಿಯಮ, 1970 ಮತ್ತುಈಶಾನ್ಯ ಪ್ರದೇಶಗಳ (ಪುನರ್ ರಚನಾ ಅಧಿನಿಯಮ 1971ರ ಮೂಲ ತಿದ್ದುಪಡಿಯಾದಂತೆ)
- ಸಂವಿಧಾನ
- ಸಂವಿಧಾನ (ಜಮ್ಮು ಮತ್ತು ಕಾಶ್ಮೀರ) ಅನುಸೂಚಿತ ಜಾತಿಗಳ ಆದೇಶ, 1956
  ಅನುಸೂಚಿತಜಾತಿ ಮತ್ತುಅನುಸೂಚಿತ ಬುಡಕಟ್ಟುಗಳ (ತಿದ್ದುಪಡಿ) ಅಧಿನಿಯಮ, 1976ರ ಮೂಲಕ ತಿದ್ದುಪಡೆಯಾದಂತೆ ಸಂವಿಧಾನ (ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ) ಅನುಸೂಚಿತ ಬುಡಕಟ್ಟುಗಳ ಆದೇಶ, 1959
- ಸಂವಿಧಾನ (ದಾದರ್ ಮತ್ತು ನಾಗರ ವೇಲಿ) ಅನುಸೂಚಿತ ಜಾತಿಗಳ ಆದೇಶ 1962
- ಸಂವಿಧಾನ (ಪಾಂಡಿಚೇರಿ) ಅನುಸೂಚಿತ ಜಾತಿಗಳ ಆದೇಶ 1984
- ಸಂವಿಧಾನ (ಅನುಸೂಚಿತ ಬುಡಕಟ್ಟುಗಳು) (ಉತ್ತರ ಪ್ರದೇಶ) 1967
- ಸಂವಿಧಾನ (ಗೋವಾ, ದಮನ್ ದೀವ್) ಅನುಸೂಚಿತ ಜಾತಿ /ಬುಡಕಟ್ಟುಗಳ ಆದೇಶ 1988
- ಸಂವಿಧಾನ (ನಾಗಾಲ್ಯಾಂಡ್) ಅನುಸೂಚಿತ ಬುಡಕಟ್ಟುಗಳ ಆದೇಶ

2. ಶ್ರೀ/ಶ್ರೀಮತಿ /ಕುಮಾರಿ ______________ ಮತ್ತು /ಅಥವಾ ಅವನ/ಅವಳ* ಕುಟುಂಬವು______________ರಾಜ್ಯ /ಕೇಂದ್ರಾಡಳಿತ ಪ್ರದೇಶದ ______________ ಜಿಲ್ಲಾ/ವಿಭಾಗದ ______________ ಗ್ರಾಮ /ಪಟ್ಟಣದ ಸಾಮಾನ್ಯ ನಿವಾಸಿಗಳು

ಸಹಿ______________

ತಹಶೀಲ್ದಾರ್______________

ಪದನಾಮ

ಕಛೇರಿಯ ಮೊಹರಿನೊಂದಿಗೆ

ಸ್ಥಳ:

ದಿನಾಂಕ

**ಅನುಬಂಧ–3**

**(ಪ್ರವರ್ಗ–1ಕ್ಕೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)**

**ನಮೂನೆ–ಇ**

**(ನಿಯಮ 3ಎ (2) (3) ನೋಡಿ)**

**ಹಿಂದುಳಿದ ವರ್ಗಗಳಿಗೆ (ಪ್ರವರ್ಗ–1) ಸೇರಿದ ಅಭ್ಯರ್ಥಿಗಳಿಗೆ ನೀಡುವ ಪ್ರಮಾಣ ಪತ್ರ**

____________________ಗ್ರಾಮ/ಪಟ್ಟಣದ / ನಗರದ ನಿವಾಸಿಯಾದ ಶ್ರೀ /ಶ್ರೀಮತಿ____________________ ಇವರ ಮಗ/ ಮಗಳು/ಪತ್ನಿ/ಪತಿಯಾದ ಶ್ರೀ/ಶ್ರೀಮತಿ____________________ ಇವರು ಹಿಂದುಳಿದ ವರ್ಗಗಳ (ಪ್ರವರ್ಗ)____________________ ಜಾತಿಯ ____________________ ಉಪ ಜಾತಿಗೆ ಸೇರಿರುತ್ತಾರೆಂದು ಪ್ರಮಾಣಿಕ ರಿಸಲಾಗಿದೆ.

ಸ್ಥಳ:

ತಹಸೀಲ್ದಾರ್

ದಿನಾಂಕ:

ತಾಲ್ಲೂಕ____________________

ಕಛೇರಿ ಮೋಹರು

## ಅನುಬಂಧ-4

## (ಪ್ರವರ್ಗ-2ಎ, 2ಬಿ, 3ಎ, 3ಬಿ ಗೆ ಸೇರಿದ ಅಭ್ಯರ್ಥಿಗಳಿಗೆ ಮಾತ್ರ)

## ನಮೂನೆ – ಎಫ್

## (ನಿಯಮ 3ಎ (2) (3)ನ್ನು ನೋಡಿ)

ಹಿಂದುಳಿದ ವರ್ಗಗಳಿಗೆ (2ಎ, 2ಬಿ, 3ಎ, 3ಬಿ) ಸೇರಿದ ಅಭ್ಯರ್ಥಿಗೆ ನೀಡುವ ಆದಾಯ ಮತ್ತು ಜಾತಿ ಪ್ರಮಾಣ ಪತ್ರ ____________________ರಲ್ಲಿ ವಾಸವಾಗಿರುವ ಶ್ರೀ/ಶ್ರೀಮತಿ ______________________________ ಇವರ ಮಗ / ಮಗಳು/ ಪತಿ/ ಪತ್ನಿಯರು ಶ್ರೀ/ಶ್ರೀಮತಿ/ಕುಮಾರಿ ______________________________ ಇವರು ಮತು ಆತನ / ಅವಳ ತಂದೆ / ತಾಯಿ/ ಪೋಷಕರು/ಪತ್ನಿ/ಪತಿಯು, ಸರ್ಕಾರಿ ಆದೇಶಗಳ ಸಂಖ್ಯೆ ಎಸ್‌ಡಬ್ಲೂಡಿ225 ಬಿಸಿಎ 2000 ದಿನಾಂಕ 30-03-2002 ರಲ್ಲಿ ನಿರ್ದಿಷ್ಟ ಪಡಿಸಿದ ಮೇಲುಸ್ತರದ (ಕ್ರೀಮಿ ಲೇಯರ್) ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಅಭ್ಯರ್ಥಿಯಾಗಲಿ ಅಥವಾ ಆತನ / ತಂದೆ ತಾಯಿ/ ಪೋಷಕರುಗಳಾಗಲಿ/ ಪತ್ನಿ/ ಪತಿಯಾಗಲಿ, ಸರ್ಕಾರದ ಸೇವೆಯಲ್ಲಿ 1ನೇ ದರ್ಜೆಯ ಅಥವಾ 2ನೇ ದರ್ಜೆಯ ಅಧಿಕಾರಿಯಾಗಿಲ್ಲವೆಂದು:

ಅಥವಾ

ಸಾರ್ವಜನಿಕ ವಲಯ ಉಧ್ಯಮದಲ್ಲಿ ತತ್ಸಮಾನದ ಹುದ್ದೆಯನ್ನು ಹೊಂದಿರುವುದಿಲ್ಲ:

ಅಥವಾ

ಖಾಸಗಿ ನಿಯೋಜಕರ ಕೈಕೆಳಗೆ, 2ನೇ ದರ್ಜೆಯ ಅಧಿಕಾರಿಯು ಸಂಬಳಕ್ಕಿಂತ (ವೇತನ ಶ್ರೇಣಿ ರೂ 43100 –83900) ಕಡಿಮೆಯಿಲ್ಲದ ಸಂಬಳವನ್ನು ಪಡೆಯುವ ನೌಕರನಾಗಿಲ್ಲವೆಂದು

ಅಥವಾ

ಆತನ / ಆಕೆಯ ತಂದೆ ತಾಯಿ/ ಪೋಷಕರು /ಪತ್ನಿ/ಪತಿಯ / ಆದಾಯವು 8 ಲಕ್ಷ ರೂಪಾಯಿಗಳಿಗಿಂತ ಮೀರುವುದಿಲ್ಲವೆಂದು (ಸರ್ಕಾರಿ ಆದೇಶ ಸಂಖ್ಯೆ ಹಿಂವಕ 304 ಟಿಸಿಎ/2017 ಬೆಂಗಳೂರು, ದಿನಾಂಕ 14-09-2028 ಅಥವಾ ಕರ್ನಾಟಕ ಭೂ ಸುಧಾರಣಾ ಅಧಿನಿಯಮ1961ರಲ್ಲಿ ನಿಗದಿಪಡಿಸಿರುವಂತೆ ಆತನ / ಆಕೆಯ ತಂದೆ ತಾಯಿ/ ಪೋಷಕರು /ಪತ್ನಿ/ಪತಿಯ / ಮಾರಟ ತೆರಿಗೆದಾರನಲ್ಲ ಅಥವಾ ಆತನ / ಆಕೆಯ ತಂದೆ ತಾಯಿ/ ಪೋಷಕರು /ಪತ್ನಿ/ಪತಿಯ / ಇವರಿಬ್ಬರೂ 10 ಯುನಿಟ್‌ಗಿಂತ ಹೆಚ್ಚಿನ ಕೃಷಿ ಭೂಮಿ ಅಥವಾ 25 ಎಕರೆಗಳಿಗಿಂತ ಹೆಚ್ಚಿನ ಪ್ಲಾಂಟೇಷನ್ ಭೂಮಿಯನ್ನು ಹೊಂದಿರುವುದಿಲ್ಲವೆಂದು ಪ್ರಮಾಣೀಕರಿಸಲಾಗಿದೆ.

ಶ್ರೀ/ ಶ್ರೀಮತಿ/ ಕುಮಾರಿ ____________________ಇವರು ____________________ಜಾತಿಗೆ ____________________ಸೇರಿದ ಉಪಜಾತಿಯವರಾಗಿದ್ದು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲೂಡಿ225 ಟಿಸಿಎ2000 ದಿ:30-03-2020 ಅನ್ವ ಹಿಂದುಳಿದ ವರ್ಗಗಳ ಪ್ರವರ್ಗ____________________ (2ಎ, 2ಬಿ, 3ಎ 3ಬಿ) ಕ್ಕೆ ಸೇರಿರುತ್ತಾರೆ. ಮತ್ತು ಈ ಕುಟುಂಬದ ವಾರ್ಷಿಕ ಆದಾಯವು (ರೂ ______________ ಮಾತ್ರ )ಎಂದು ಪ್ರಮಾಣೀಕರಿಸಲಾಗಿದೆ.

ಸ್ಥಳ:

ದಿನಾಂಕ :

ತಹಸೀಲ್ದಾರ್

____________________ ತಾಲ್ಲೂಕ

ಕಛೇರಿ ಮೋಹರು

ಅನುಬಂಧ–5

ನಮೂನೆ–1

**ಜನರಲ್ ಮೆರಿಟ್ ಅಭ್ಯರ್ಥಿಗಳು ಮೇಲುಸ್ತರಕ್ಕೆ ಸೇರಿಲ್ಲವೆಂದು, ದೃಡೀಕರಿಸಿ ಗ್ರಾಮೀಣ ಮೀಸಲಾತಿಯನ್ನು ಕೋರಲು ಸಲ್ಲಿಸಬೇಕಾದ ಪ್ರಮಾಣ ಪತ್ರ**

(ಜನರಲ್ ಮೆರಿಟ್ ಅಭ್ಯರ್ಥಿಗಳು ಭರ್ತಿ ಮಾಡಬೇಕಾದ ನಮೂನೆ)

ಇವರಿಗೆ: ತಹಶೀಲ್ದಾರರು

____________________ತಾಲ್ಲೂಕ
____________________ಜಿಲ್ಲೆ

ಮಾನ್ಯರೆ,

ಶ್ರೀ/ಶ್ರೀಮತಿ______________________________ಎಂಬುವವರ ಮಗ/ ಮಗಳು/ ಪತಿ/ ಪತ್ನಿ______________________________ ಆದ ನಾನು ಮೇಲುಸ್ತರದಲ್ಲಿ ಬರುವುದಿಲ್ಲವೆಂದು ನೇರ ನೇಮಕಾತಿಯಲ್ಲಿ ಗ್ರಾಮೀಣ ಅಭ್ಯರ್ಥಿ ಮೀಸಲಾತಿಯನ್ನು ಪಡೆಯುವುದಕ್ಕಾಗಿ ಪ್ರಮಾಣ ಪತ್ರವನ್ನು ಪಡೆಯಲು ತಮ್ಮಲ್ಲಿ ಈ ಕೆಳಕಂಡ ಮಾಹಿತಿಗಳನ್ನು ಒದಗಿಸುತ್ತಾ ಕೋರುತ್ತೇನೆ.

1. ಅಭ್ಯರ್ಥಿಯ ಹೆಸರು ಮತ್ತು ಉದ್ಯೋಗ:
2. ಅಭ್ಯರ್ಥಿಯ ಸ್ವಂತ ಗ್ರಾಮ:
   ತಾಲ್ಲೂಕ
   ಜಿಲ್ಲೆ:
3. ಅಭ್ಯರ್ಥಿಯು ಹುಟ್ಟಿದ ದಿನಾಂಕ ವಯಸ್ಸು ಮತ್ತು ಹುಟ್ಟಿದ ಸ್ಥಳ:
4. ಅಭ್ಯರ್ಥಿಯ ತಂದೆ/ತಾಯಿ/ಪೋಷಕರ ಪತಿಯು/ ಪತ್ನಿಯ ಹೆಸರು ಮತ್ತು ಉದ್ಯೋಗ:
   (ಉದ್ಯೋಗವು ಸರ್ಕಾರಿ/ಅರೆ ಸರ್ಕಾರಿ/ ಸಾರ್ವಜನಿಕ ಉದ್ಯಮ/ವಾಸಗಿ)
5. ಅಭ್ಯರ್ಥಿಯ ಪ್ರಸ್ತುತ ವಿಳಾಸ :
   (ಸ್ಪಷ್ಟವಾಗಿ ನಮೂದಿಸುವುದು)
6. ಅಭ್ಯರ್ಥಿಯ ಖಾಯಂ ವಿಳಾಸ:
7. ಅಭ್ಯರ್ಥಿಯ ಶಾಲಾ ಶಿಕ್ಷಣದ ವ್ಯಾಸಂಗ ಮಾಡಿದ ಶಾಲೆಗಳ ವಿವರಗಳು
   ಪ್ರಾಥಮಿಕ
   ಮಾಧ್ಯಮಿಕ
   ಪ್ರೌಢ
8. ಅಭ್ಯರ್ಥಿಯ ಹಾಗೂ ಅಭ್ಯರ್ಥಿಯ ತಂದೆ/ತಾಯಿ/ಪೋಷಕರ (ತಂದೆ/ತಾಯಿ ಜೀವಂತವಿಲ್ಲದಿದ್ದರೆ) ಇವರ ಒಟ್ಟು ವಾರ್ಷಿಕ ಆದಾಯ ಎಲ್ಲಾ ಮೂಲಗಳಿಂದ
   1) ವೇತನ ಶ್ರೇಣಿ
   2) ಜಮೀನಿನ ವಿವರ
   3) ಇತರ ಮೂಲಗಳು
9. ಆದಾಯ ತೆರಿಗೆ ಪಾವತಿದಾರರೆ?

10. ಸಂಪತ್ತು ತೆರಿಗೆ ಪಾವತಿದಾರರೆ?

11. ಮಾರಾಟ ತೆರಿಗೆ ಪಾವತಿದಾರರೆ?

## ಪ್ರಮಾಣೀಕೃತ ಘೋಷಣೆ

**ಈ ಮೇಲೆ ನನ್ನಿಂದ ಒದಗಿಸಿದ ಮಾಹಿತಿ/ ವಿವರಣೆಯು ನಾನು ತಿಳಿದಿರುವಷ್ಟರ ಮಟ್ಟಿಗೆ ಸತ್ಯವೆಂದು ಶ್ರದ್ಧಾಪೂರ್ವಕವಾಗಿ ದೃಡೀಕರಿಸುತ್ತೇನೆ ಮತ್ತು ಘೋಷಿಸುತ್ತೇನೆ.**

ಸ್ಥಳ: ತಮ್ಮ ವಿಧೇಯ

ದಿನಾಂಕ: (ಅಭ್ಯರ್ಥಿಯ ಸಹಿ)

ಮೇಲೆ ಒದಗಿಸಲಾದ ಮಾಹಿತಿ ಗಳು ಸತ್ಯವಾಗಿರುತ್ತಾವೆ ಎಂದು ಪ್ರಮಾಣಿಕರಿಸುತ್ತಾ ಈ ಮಾಹಿಗಳು ಅಸತ್ಯವೆಂದು ದೃಡಪಟ್ಟಲ್ಲಿ ಅಪರಾಧ ವಿಚಾರಣೆಗೆ ಬದ್ದನಾಗಿರುತ್ತೇನೆ.

ಸ್ಥಳ: ತಂದೆ/ತಾಯಿ/ಪೋಷಕರ ಸಹಿ

ದಿನಾಂಕ: (ತಂದೆ/ತಾಯಿ ಜೀವಂತವಿಲ್ಲದಿದ್ದರೆ)

(ಹೆಂಡತಿ/ಗಂಡ ಇವರ ಸಹಿ)

**ಸ್ಥಳೀಯ ಇಬ್ಬರು ಸಾಕ್ಷಿದಾರರು**

ಅಭ್ಯರ್ಥಿಯು ಮತ್ತು ಅವರ ತಂದೆ/ತಾಯಿ/ಪೋಷಕರು/ಪತಿ/ಪತ್ನಿ ಇವರನ್ನು ಹಾಗೂ ಇವರ ಸಹಿಯನ್ನು ಗುರುತಿಸುತ್ತೇನೆ.

ಸಾಕ್ಷಿದಾರರ ಸಹಿ 1)

(ಪೂರ್ಣ ವಿಳಾಸದೊಂದಿಗೆ) 2)

## ಪರಿಶೀಲನಾ ಪ್ರಮಾಣ ಪತ್ರ

1. ಶ್ರೀ/ಶ್ರೀಮತಿ ______________________ ಎಂಬುವವರ ಮಗ/ ಮಗಳು / ಪತಿ/ಪತ್ನಿ/ ಶ್ರೀ/ಶ್ರೀಮತಿ/ಕುಮಾರಿ______________________ ಎಂಬುವವರು ಕರ್ನಾಟಕ ರಾಜ್ಯದ ______________ ಜಿಲ್ಲೆಯ ವಿಭಾಗ____________ ಗ್ರಾಮ / ಪಟ್ಟಣ / ನಗರದಲ್ಲಿ ಸಾಮಾನ್ಯ ನಿವಾಸಿಯಾಗಿದ್ದಾರೆ ಮತ್ತು ಇವರು ಜನರಲ್ ಮೆರಿಟ್ ವರ್ಗಕ್ಕೆ ಸೇರಿದವರಾಗಿರುತ್ತಾರೆ.
2. ಶ್ರೀ/ಶ್ರೀಮತಿ/ಕುಮಾರಿ______________________ ಇವರ ತಂದೆ /ತಾಯಿ/ ಪೋಷಕರು ಸರ್ಕಾರಿ ಆದೇಶ ಸಂಖ್ಯೆ ಎಸ್‌ಡಬ್ಲೂಡಿ251 ಟಿಸಿಎ/94, ಬೆಂಗಳೂರು ದಿನಾಂಕ 31–01–1995ರನ್ವಯ ಜನರಲ್ ಮೆರಿಟ್ ವರ್ಗದ ಮೇಲುಸ್ತರದಲ್ಲಿ ಬರುವುದಿಲ್ಲವೆಂದು ಪ್ರಮಾಣಿಕರಿಸಲಾಗಿದೆ.

ಸ್ಥಳ: ತಹಸೀಲ್ದಾರ್

ದಿನಾಂಕ : ______________ತಾಲ್ಲೂಕ

ಕಛೇರಿಯ ಮೊಹರು

**ಸೂಚನೆ: 1. ಇದರಲ್ಲಿ ಉಪಯೋಗಿಸಲಾದ 'ಸಾಮಾನ್ಯ ನಿವಾಸಿ' ಪದವು 1950ರ ಜನತಾ ಪ್ರಾತಿನಿಧ್ಯ ಕಾಯ್ದೆಯ 20ನೇ ಅನುಚ್ಛೇದದಲ್ಲಿನ ಅರ್ಥವನ್ನು ಹೊಂದಿರುತ್ತದೆ.**

**ಸೂಚನೆ2. ಪರಿಶೀಲನಾ ಪ್ರಮಾಣ ಪತ್ರ ನೀಡುವ ಅಧಿಕೃತ ಅಧಿಕಾರಿಯು ಸರ್ಕಾರಿ ಆದೇಶ ಸಂಖ್ಯೆ: ಎಸ್‌ಡಬ್ಲೂಡಿ251 ಟಿಸಿಎ94, ಬೆಂಗಳೂರು ದಿನಾಂಕ 31–01–1995 ರನ್ವಯ ಮೇಲುಸ್ತೀರಿ ( ) ದವರನ್ನು ಗುರುತಿಸಲು ನಿಗದಿಪಡಿಸಲಾಗಿರುವ ಅಂಶಗಳನ್ನು ವಿವರವಾಗಿ ಖಚಿತಪಡಿಸಿಕೊಂಡು ನಂತರವೇ ಪ್ರಮಾಣ ಪತ್ರ ನೀಡತಕ್ಕದ್ದು.**

## ಅನುಬಂಧ–5

## ನಮೂನೆ–2

## ಗ್ರಾಮೀಣ ಅಭ್ಯರ್ಥಿ ಪ್ರಮಾಣ ಪತ್ರ

ಶ್ರೀ/ಶ್ರೀಮತಿ________________________ರವರ ಮಗ / ಮಗಳು/ಪತಿ/ಪತ್ನಿ/ಶ್ರೀ/ಶ್ರೀಮತಿ/ಕುಮಾರಿ ________________ ಜಿಲ್ಲೆ ____________ತಾಲ್ಲೂಕ____________ಗ್ರಾಮದಲ್ಲಿ ________________ವಾಸವಾಗಿರುವ ಇವರು ಒಂದನೇ ತರಗತಿಯಿಂದ ____________ತರಗತಿವರೆಗೆ __________ ಜಿಲ್ಲೆ __________ತಾಲ್ಲೂಕ ____________ಪಟ್ಟಣ____________ ಶಾಲೆಯಲ್ಲಿ ವ್ಯಾಸಂಗ ಮಾಡಿ __________ ವರ್ಷ ನಡೆದ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಈ ಶಾಲೆಯು ಅಭ್ಯರ್ಥಿಯು ವ್ಯಾಸಂಗ ಮಾಡಿದ ಅವಧಿಯಲ್ಲಿ ಕರ್ನಾಟಕ ಪೌರ ನಿಗಮಗಳ ಅಧಿನಿಯಮ, 1976 ಅಥವಾ ಕರ್ನಾಟಕ ಪೌರ ಸಭೆ ಗಳ ಅಧಿನಿಯಮ 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿ ಒಂದು ದೊಡ್ಡ ನಗರ ಪ್ರದೇಶ ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾದ ಪ್ರದೇಶದಲ್ಲಿತ್ತು.

ಮೇಲು ರುಜು
ಕ್ಷೇತ್ರ ಶಿಕ್ಷಣ ಅಧಿಕಾರಿ
ಕಛೇರಿಯ ಮೋಹರು

ಸಹಿ/
ಮುಖ್ಯೋಪಾಧ್ಯಾಯರು ಸಹಿ
ಮತ್ತು ಸಂಸ್ಥೆಯ ಮೊಹರು

ಸ್ಥಳ:
ದಿನಾಂಕ:

## ಅನುಬಂಧ–6

## ಕನ್ನಡ ಮಾಧ್ಯಮ ವ್ಯಾಸಂಗ ಪ್ರಮಾಣ ಪತ್ರ

ಶ್ರೀ/ಶ್ರೀಮತಿ ____________________________________________ಇವರ ಮಗ /ಮಗಳು /ಪತಿ/ ಪತ್ನಿ /ಶ್ರೀಮತಿ/ ಕುಮಾರಿ____________________________ಜಿಲ್ಲೆ ______________________________ ತಾಲ್ಲೂಕ _________________ _____ ಗ್ರಾಮದಲ್ಲಿ ವಾಸವಾಗಿರುವ ಇವರು _____________ನೇ ತರಗತಿಯಿಂದ ____________ ನೇ ತರಗತಿವರೆಗೆ ____________________ಶೈಕ್ಷಣಿಕ ವರ್ಷದಿಂದ _____________ ಶೈಕ್ಷಣಿಕ ವರ್ಷದವರೆಗೆ __________________________________ ಶಾಲೆಯಲ್ಲಿ ಕನ್ನಡ ಮಾಧ್ಯಮದಲ್ಲಿ ವ್ಯಾಸಂಗ ಮಾಡಿರುತ್ತಾರೆಂದು ಪ್ರಮಾಣೀಕರಿಸಲಾಗಿದೆ.

ಸಹಿ/
ಮುಖ್ಯೋಪಾಧ್ಯಾಯರು
ಮತ್ತು ಸಂಸ್ಥೆಯ ಮೊಹರು

ಸ್ಥಳ:

ದಿನಾಂಕ:

## ಅನುಬಂಧ–7(1)

**ಕರ್ನಾಟಕ ಸರ್ಕಾರದ ಅಧಿಕೃತ ಪ್ರಮಾಣ ಪತ್ರ ಸಂಖ್ಯೆ: ಸಿಆಸುಇ 115 ಸೆನೆನಿ 2005, ದಿನಾಂಕ:19–11–2005**

CERTIFICATE FOR THE PERSONS WITH DISABILITIES

This is to certify that Sri /Smt/Kum______________________________son / wife/ daughter of Sri ________________________________________ age _______________old, male/female Registration No.________________ is a case of ________________________________ He /She is physically disabled / visual disabled / speech & hearing disabled and has _________% (_________________ percent) Permanent (Physical impairment visual impairment speech & hearing impairment) in Relation to his /her______________________________

Note:

1. This condition is progressive /non progressive / likely to improve / not likely to improve *
2. Re- assessment is not recommended / is recommended after a period of __________ months /years *

- Strike out which is not applicable

(Recent attest photograph showing the disability affixed here)

Sd

Orthopedic / senior Specialist

sd

ChairpersonDistrict eye /ENT/Psychiatrist Member/

sd

Medical Surgeon District

Counter Signedby the Medical Superintendent

CMO/Head of the Hospital with Seal

Signature /thumb impression of the disabled person

**ಅನುಬಂಧ–7(2)**

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ272ಸೇನೆನಿ2013 ದಿನಾಂಕ:11–02–2021ರ ಕಂಡಿಕೆ 5 ರಂತೆ

**ಅಭ್ಯರ್ಥಿಯು ಬರೆಯಲು ದೈಹಿಕ ಅಸಮರ್ಥತೆ ಹೊಂದಿರುವ ಬಗ್ಗೆ ಪ್ರಮಾಣ ಪತ್ರ**

**(ದೃಷ್ಟಿ ಮಾಂದ್ಯತೆ, ಚಲನವಲನ ವೈಕಲ್ಯ (ಎರಡೂ ತೋಳುಗಳ ಪೀಡಿತಗೊಂಡಂತಹ) ಮತ್ತು ಮಿದುಳಿನ ಪಾರ್ಶ್ವವಾಯು–ಈ ಎದ್ದು ಕಾಣುವ ಅಂಗವಿಕಲತೆಯನ್ನು ಹೊಂದಿರುವ ಅಭ್ಯರ್ಥಿಗಳನ್ನು ಹೊರೆತುಪಡಿಸಿ)**

ಈ ವೈದ್ಯಕೀಯ ಮಂಡಳಿಯು ____________________________________ (ಅಂಗವೈಕಲ್ಯ ಪ್ರಮಾಣ ಪತ್ರದಲ್ಲಿ ದಾಖಲಿಸಲಾಗಿರುವ ಅಂಗವೈಕಲ್ಯತೆಯ ಸ್ವರೂಪ ಮತ್ತು ಪ್ರತಿಶತ ಪ್ರಮಾಣ) ಅಂಗವೈಕಲ್ಯವನ್ನು ಹೊಂದಿರುವ ಶ್ರೀ/ಶ್ರೀಮತಿ/ಕುಮಾರಿ________________ (ಅಂಗವಿಕಲ ಆಭ್ಯರ್ಥಿಯ ಹೆಸರು) __________________________ ಇವರ ಮಗ /ಮಗಳು ______________________ (ಗ್ರಾಮ, ತಾಲ್ಲೂಕ, ಜಿಲ್ಲೆ) ಇಲ್ಲಿನ ನಿವಾಸಿ ಇವರನ್ನು ಪರೀಕ್ಷಿಸಿದ್ದು ಇವರ ಅಂಗವೈಕಲ್ಯತೆಯು ಇವರ ಬರವಣಿಗೆ ಸಾಮರ್ಥ್ಯವನ್ನು ಕುಂಠಿತಗೊಳಿಸುವ ದೈಹಿಕ ಅಸಮರ್ಥತೆಯಾಗಿದೆ ಎಂದು ಪ್ರಮಾಣೀಕರಿಸುತ್ತದೆ.

(ಸಹಿ)

ಅಧ್ಯಕ್ಷರು ಮತ್ತು ಸದಸ್ಯರು, ವೈದ್ಯಕೀಯ ಮಂಡಳಿ

ಸ್ಥಳ:

ದಿನಾಂಕ:

ಟಿಪ್ಪಣೆ:

1. ವೈದ್ಯಕೀಯ ಮಂಡಳಿಯ ಸ್ಥಳ ವಿವರಗಳೊಂದಿಗೆ, ಮಂಡಳಿಯ ಅಧ್ಯಕ್ಷರು ಮತ್ತು ಸದಸ್ಯರ ಹೆಸರು ಮತ್ತು ಹುದ್ದೆಗಳನ್ನು ಸ್ಪಷ್ಟವಾಗಿ ನಮೂದಿಸಬೇಕು
2. ಅಭ್ಯರ್ಥಿಯು ಹೊಂದಿರುವ ಅಂಗವೈಕಲ್ಯಕ್ಕೆ ಸಂಬಂಧಿಸಿದ ತಜ್ಞ ವೈದ್ಯರೊಬ್ಬರು ಆಯಾ ಮಂಡಳಿಯ ಸದಸ್ಯರಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಅನುಬಂಧ–7(3)

ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ272ಸೇನೆನಿ2013 ದಿನಾಂಕ:11–02–2021ರ ಕಂಡಿಕೆ 5 ರಂತೆ

## ತನ್ನದೇ ಆದ ಲಿಪಿಕಾರನ ಸೇವೆಯನ್ನು ಪಡೆಯಲು ಮುಚ್ಚಳಿಕೆ ಪತ್ರ

ಶ್ರೀ/ಶ್ರೀಮತಿ________________________ ಆದ ನಾನು ____________________________(ಅಂಗವೈಕಲ್ಯದ ಹೆಸರು) ಅಂಗವೈಕಲ್ಯವನ್ನು ಹೊಂದಿದ್ದು________________________________(ಪರೀಕ್ಷೆಯ ಹೆಸರು) ಪರೀಕ್ಷೆಗೆ ______________________ ಕ್ರಮ ಸಂಖ್ಯೆಯಲ್ಲಿ ____________________ (ಸ್ಥಳ, ತಾಲ್ಲೂಕ, ಜಿಲ್ಲೆ) ಸ್ಥಳದಲ್ಲಿನ ____________________ಕೇಂದ್ರದಲ್ಲಿ ಹಾಜರಾಗಲಿದ್ದೇನೆ. ನಾನು ________________________ ವಿಧ್ಯಾರ್ಹತೆಯನ್ನು ಹೊಂದಿರುತ್ತೇನೆ.

ಈ ಕೆಳಗೆ ಸಹಿ ಮಾಡಿರುವ ನನಗೆ ಶ್ರೀ/ಶ್ರೀಮತಿ/ಕುಮಾರಿ________________________ (ಲಿಪಿಕಾರನ ಹೆಸರು) ಇವರು ಮೇಲೆ ತಿಳಿಸಲಾದ ಪರೀಕ್ಷೆಯಲ್ಲಿ ಲಿಪಿಕಾರನ ಸೇವೆಯನ್ನು ಒದಗಿಸುತ್ತಾರೆ ಎಂದು ನಾನು ಈ ಮೂಲ ತಿಳಿಸುತ್ತೇನೆ.

ಲಿಪಿಕಾರನ ವಿಧ್ಯಾರ್ಹತೆಯು__________________________ ಎಂದು ನಾನು ಈ ಮೂಲಕ ದೃಢೀಕರಿಸಿ ಮುಚ್ಚಳಿಕೆ ನೀಡುತ್ತೇನೆ. ಒಂದು ವೇಳೆ ಲಿಪಿಕಾರನ ವಿಧ್ಯಾರ್ಹತೆಯು ಮೇಲೆ ತಿಳಿಸಲಾದ ವಿಧ್ಯಾರ್ಹತೆಗಿಂತ ಹೆಚ್ಚಾಗಿರುವುದು ಹಾಗೂ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ272 ಸನನಿ 2013, ದಿನಾಂಕ 09–11–2020ರ ಆದೇಶ ಭಾಗದ ಕಂಡಿಕೆ:4 ಉಪಕಂಡಿಕೆ (7) ರಲ್ಲಿ ನಿಗದಿಪಡಿಸಿರುವುದಕ್ಕೆ ಒಳಪಡದಿರುವುದು ಯಾವುದೇ ಹಂತದಲ್ಲಿ ಕಂಡುಬಂದಲ್ಲಿ, ನಾನು ಈ ಪರೀಕ್ಷೆಯಲ್ಲಿ ಉತ್ತೀರ್ಣವಾದಲ್ಲಿ ಪಡೆಯಬಹುದಾದ ಹುದ್ದೆ ಮತ್ತು ಅದಕ್ಕೆ ಸಂಬಂಧಿಸಿದ ಎಲ್ಲಾ ಹಕ್ಕುಗಳು ನನ್ನಿಂದ ಮುಟ್ಟುಗೋಲು ಹಾಕಿಕೊಳ್ಳಲ್ಪಡುತ್ತವೆ ಎಂಬುದನ್ನು ಸ್ಪಷ್ಟವಾಗಿ ಅರಿತಿರುತ್ತೇನೆ ಹಾಗೂ ಈ ಷರತ್ತಿಗೆ ಸಂಪೂರ್ಣವಾಗಿ ಬದ್ಧನಾಗಿರುತ್ತೇನೆ.

**(ಅಂಗವಿಕಲ ಅಭ್ಯರ್ಥಿಯ ಸಹಿ)**

**ಸ್ಥಳ:**

**ದಿನಾಂಕ:**

# ಅನುಬಂಧ-8

## ಅನುಬಂಧ-ಎ

## ಅರ್ಹತಾ ಪ್ರಮಾಣ ಪತ್ರ
## (ಅನುಚ್ಛೇದ 371(ಜೆ) ಮೇರೆಗೆ)
## [3 (3)ನೇ ನಿಯಮ ನೋಡಿ]

{ಪ್ರಮಾಣ ಪತ್ರ ನೀಡಲು ಕರ್ನಾಟಕ ಸಾರ್ವಜನಿಕ ಉದ್ಯೋಗ (ಕಲ್ಯಾಣ- ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ನಿಯಮಗಳು 2013}

ಶ್ರೀ/ಶ್ರೀಮತಿ________________________________ರವರು____________________ರವರ ಮಗ /ಹೆಂಡತಿಯಾಗಿದ್ದು, ಇವರು ಕರ್ನಾಟಕ ರಾಜ್ಯದ ________________________ ಜಿಲ್ಲೆಯ_______________________ ತಾಲ್ಲೂಕಿನ _______________________ಗ್ರಾಮ / ಪಟ್ಟಣದ ಸ್ಥಳೀಯ ವ್ಯಕ್ತಿಯಾಗಿದ್ದಾರೆ.

ಸ್ಥಳ:

ಹೆಸರು__________________

ಅಸಿಸ್ಟಂಟ್ ಕಮಿಷನರ್------ಉಪ ವಿಭಾಗ

ದಿನಾಂಕ

____________________ಜಿಲ್ಲೆ

ಪ್ರಧಾನ ಕಾರ್ಯಾಲಯ

ಅನುಬಂಧ–09(1)

**GOVERNMENT OF KARANATAKA**

**Department of Sainik Welfare and resettlement**

**Office of the Deputy Director, Department of Sainik Welfare & Resettlement (Karnataka)**

**No:**____________________ Date:____________________

**: CERTIFICATE:**

This is to certify that Sri / Smt/ Kum ____________________________is an applicant for ____________________________ is an applicant for __________________________________ is the spouse / son / Daughter of No___________________ Rank_______________________Name ______________________________________of Army/ Navy/ Air force. Who is an Ex-Serviceman according to the definition laid down by the Minister of Defence, Government of India. He served from ___________ to ______________

The Ex- Serviceman had declared his home town in Karnataka at the time of entry into service as per records & home eligible to avail reserved seats under Ex-Serviceman quota. His Permanent home Address at the time of entry into service was as under. ________________________________

__________________________________

Signature of the Deputy Director

Department of Sainik Welfare & Resettlement

Palce:

Date: District :

ಅನುಬಂಧ-09(2)

# CERTIFICATE

This is certify that sri/smt/Kum/______________________________ is an applicant for ______________________________is the spouse / son / Daughter of No_______________ Rank________________Name ______________________________who died/ disabled while in service according to the certificate issued by Defense Authority . He Died/ Disabled on _________________________ Home address of the individual at the time of Joining Defence Service as per the records is:

______________________________________

______________________________________

Palce:

Date:

Signature of the Deputy Director
Department of Sainik Welfare & Resettlement

**ಅನುಬಂಧ–10**

**ನಡತೆ ಪ್ರಮಾಣ ಪತ್ರ**

ಶ್ರೀ_________________________________________ಇವರ ಮಗನಾದ /ಮಗಳಾದ ಶ್ರೀ/ಶ್ರೀಮತಿ__________________________________ಇವರನ್ನು ನಾನು ಕಳೆದ ________________________ ವರ್ಷ________________ ತಿಂಗಳುಗಳಿಂದ ಬಲ್ಲೆ ಮತ್ತು ನನಗೆ ತಿಳಿದ ಮಟ್ಟಿಗೆ ಹಾಗೂ ನಂಬುವಷ್ಟರ ಮಟ್ಟಿಗೆ ಒಳ್ಳೆಯ ನಡತೆಯುಳ್ಳವರಾಗಿದ್ದಾರೆ ಮತ್ತು ಸರ್ಕಾರಿ ಉದ್ಯೋಗಕ್ಕೆ ಸೇರಲು ಅನರ್ಹಗೊಳಿಸುವಂತಹ ಯಾವ ಪೂರ್ವೋತ್ತರಗಳನ್ನು ಅವರು ಹೊಂದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ಶ್ರೀ /ಶ್ರೀಮತಿ ____________________________________ ಇವರು ನನಗೆ ಸಂಬಂಧಿಕರಲ್ಲ.

ಸ್ಥಳ:
ದಿನಾಂಕ:

ರುಜು:
ಉದ್ಯೋಗನಾಮ:

## ಅನುಬಂಧ–11

**ಪ್ರಸ್ತುತವಾಗಿ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ನೇಮಕಾತಿ ಪ್ರಾಧಿಕಾರದಿಂದ ಪಡೆಯಬೇಕಾದ ನಿರಾಕ್ಷೇಪಣಾ / ಅನುಮತಿ ಪತ್ರದ ನಮೂನೆ.**

ಸಂ:______________________ ದಿನಾಂಕ__________

**:ನಿರಾಕ್ಷೇಪಣಾ / ಅನುಮತಿ ಪತ್ರ:**

ಶ್ರೀ/ಶ್ರೀಮತಿ______________________ ತಂದೆ______________ ಇವರು ದಿನಾಂಕ ______________ರಿಂದ ______________ ಸಂಸ್ಥೆಯಲ್ಲಿ ______________________________

ಹುದ್ದೆಯಲ್ಲಿ ಖಾಯಂ / ಹಂಗಾಮಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಸದರಿಯವರು ನೇಮಕಾತಿ ಪ್ರಕಟಣೆ ಸಂಖ್ಯೆ: ______________________ರಂತೆ ರಾಯಚೂರು ಮತ್ತು ಕೊಪ್ಪಳ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ.,ನಿಯಮಿತ ರಾಯಚೂರು ಇವರು ಅಹ್ವಾನಿಸಿರುವ ______________________ ಹುದ್ದೆಗೆ ಅರ್ಜಿ ಸಲ್ಲಿಸಲು ಈ ಸಂಸ್ಥೆ/ ಇಲಾಖೆಯಿಂದ ಯಾವುದೇ ಆಕ್ಷೇಪಣೆ ಇರುವುದಿಲ್ಲ.

ಪ್ರಸ್ತುತ ನೇಮಕಾತಿ ಪ್ರಾಧಿಕಾರಿಗಳ ಪದನಾಮ
ಮೊಹರು

ಡಿ.ಸಿ.ಸಿ. ಬ್ಯಾ. ಪ್ರಧಾನ ಕಾರ್ಯಾಲಯ ರಾಯಚೂರು